ಸಂಪುಟ : 9 ಸಂಚಿಕೆ 03 ಪುಟ : 4 ಬೆಲೆ : 3.00 ರವಿವಾರ ಜನವರಿ 28, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್


# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 03 Pages : 4 Price : 3.00 Sunday JANUARY 28, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಪ್ರವಾಸ



■ವಿಜಯಸಾಕ್ಷಿ ಸುದ್ದಿ, ಗದಗ

ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್. ಕೆ. ಪಾಟೀಲ ಅವರ ಪ್ರವಾಸದ ವಿವರ ಇಂತಿದೆ.

ಸಚಿವರು ಜನವರಿ 28ರಂದು ಬೆಳಿಗ್ಗೆ 10 ಗಂಟೆಗೆ ಹುಲಕೋಟಿಯಲ್ಲಿ ಶ್ರೀ ಕೈಲಾಸ ಆಶ್ರಮದ 32ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮ ದಲ್ಲಿ ಪಾಲ್ಗೊಳ್ಳುವರು. ನಂತರ ಮಧ್ಯಾಹ್ನ 1 ಗಂಟೆಗೆ ಗದಗ ನಗರದ ಡಾ. ಬಿ. ಆರ್. ಅಂಬೇಡ್ಕರ್ ಭವನದಲ್ಲಿ ರಾಜ್ಯ ಮಟ್ಟದ ಆಟೋ ಚಾಲಕರ, ಮಾಲಕರ ಬೃಹತ್ ಸಮಾವೇಶದಲ್ಲಿ ಪಾಲ್ಗೊಳ್ಳುವರು. ಸಾಯಂಕಾಲ 5 ಗಂಟೆಗೆ ಹಾಲತಗೇರಿ ರಸ್ತೆಯ ಆರ್ಕೇಡ್ ಕಾಂಪ್ಲೆಕ್ಸ್ ಹತ್ತಿರ ಅಬ್ದುಲ್ ಕಲಾಂ ಶಾದಿಮಹಲ್ ರಸ್ತೆಯಿಂದ ಸಂಬಾಪುರ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಗದಗನಲ್ಲಿ ವಾಸ್ತವ್ಯ ಮಾಡುವರು.

ಜನವರಿ 29ರಂದು ಬೆಳಿಗ್ಗೆ 10 ಗಂಟೆಗೆ ಹುಲಕೋಟಿಯಲ್ಲಿ ಶ್ರೀ ರಾಜರಾಜೇಶ್ವರಿ ಟ್ರಸ್ಟ್ ಸಭೆಯಲ್ಲಿ ಪಾಲ್ಗೊಂಡು, ಮಧ್ಯಾಹ್ನ 1 ಗಂಟೆಗೆ ಮುಂಡರಗಿ ತಾಲೂಕಿನ ಸುಕ್ಷೇತ್ರ ಸಿಂಗಟಾಲೂರಿನಲ್ಲಿ ಉದ್ಯಾನವನ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಗದಗನಲ್ಲಿ ವಾಸ್ತವ್ಯ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

### ಕೊಪ್ಪಳ ಗವಿಮಠದ ಜಾತ್ರೆಗೆ ಶ್ರೀಮಠದ ಆವರಣದಲ್ಲಿ ಸುತ್ತೂರು ಶ್ರೀಗಳಿಂದ ಚಾಲನೆ

# ಗವಿಮಠದ ಭಕ್ತರು ನಾಡಿಗೆ ಮಾದರಿ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಮಹಾ ಮಹಿಮ ಗವಿಸಿದ್ದೇಶ್ವರ ನಾಡಿನ ಲಕ್ಷಾಂತರ ಭಕ್ತರ ಹೃದಯದಲ್ಲಿ ಸದಾ ನೆಲೆಸಿದ್ದಾನೆ. ಈ ಪರಿಯ ಜನಸಾಗರ ಸೇರಲು ಕೇವಲ ಎರಡು ಶಕ್ತಿಗಳಿಂದ ಮಾತ್ರ ಸಾಧ್ಯ. ಒಂದು, ಗವಿಸಿದ್ದೇಶನ ಶಕ್ತಿಯಾಗಿದ್ದರೆ, ಇನ್ನೊಂದು ಭಕ್ತರ ಭಕ್ತಿಯ ಶಕ್ತಿ ಎಂದು ಶ್ರೀ ಗವಿಸಿದ್ಧೇಶ್ವರ ಸ್ವಾಮಿಗಳು ನುಡಿದರು.

ನಿರಂತರವಾಗಿ ತಿಂಗಳ ಕಾಲ ನಡೆಯುವ ಕಲ್ಯಾಣ ಕರ್ನಾಟಕದ ಪ್ರಮುಖ ಧಾರ್ಮಿಕ ಕೇಂದ್ರ ಕೊಪ್ಪಳದ ಗವಿಮಠದ ಜಾತ್ರೆಗೆ ಶ್ರೀಮಠದ ಆವರಣದಲ್ಲಿ ಶನಿವಾರ ಧ್ವಜಾರೋಹಣ ನೆರವೇರಿಸುವ ಮೂಲಕ ಸುತ್ತೂರು ಶ್ರೀಗಳು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸೇರಿದ್ದ ಅಪಾರ ಭಕ್ತಗಣವನ್ನುದ್ದೇಶಿಸಿ ಆಶೀರ್ವಚನ ನೀಡಿದ ಗವಿಸಿದ್ಧೇಶ್ವರ ಶ್ರೀಗಳು, ಗವಿಸಿದ್ದೇಶ ನಾಡಿನ ಲಕ್ಷಾಂತರ ಹೃದಯದಲ್ಲಿ ನೆಲೆಸಿದ್ದಾನೆ. ಅಜ್ಜನ ಜಾತ್ರೆಗೆ ಬನ್ನಿ ಎನ್ನುವ ಮೂರು ಅಕ್ಷರ ಲಕ್ಷಾಂತರ ಭಕ್ತರ ಒಂದೆಡೆ ಸೇರಲು ಕಾರಣವಾಗಿದೆ. ರಥೋತ್ಸವದ ನಂತರ ಭಕ್ತರು ನಿಧಾನವಾಗಿ ಮನೆಗೆ ತೆರಳಿದಾಗ ನನಗೆ ಸಂತೋಷವಾಗುತ್ತದೆ. ಅಲ್ಲದೇ ಗವಿಮಠದ ಭಕ್ತರು ನಾಡಿಗೆ ಮಾದರಿಯಾಗಿದ್ದು ಶಾಂತಿ-ಶಿಸ್ತಿಗೆ ಹೆಸರುವಾಸಿಯಾಗಿದ್ದಾರೆ ಎಂದು ಸಂತಸ



ವ್ಯಕ್ತಪಡಿಸಿದರು.

ಜಾತ್ರಾ ಮಹೋತ್ಸವದ ಉದ್ಘಾಟನೆಗೆ ಆಗಮಿಸಿರುವ ಸುತ್ತೂರು ಶ್ರೀಗಳು ನೂರಾರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ, ಲಕ್ಷಾಂತರ ಬಡ ಮಕ್ಕಳ ಜೀವನದಲ್ಲಿ ಅಕ್ಷರದ ದೀಪ ಬೆಳಗುವಕೆಲಸ ಮಾಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಕೇಂದ್ರ ಸಚಿವ ಭಗವಂತ ಖೂಬಾ, ಉಸ್ತುವಾರಿ ಸಚಿವ ಶಿವರಾಜ ತಂಗಡಗಿ, ಸಂಸದ ಸಂಗಣ್ಣ ಕರಡಿ, ಶಾಸಕ ಕೆ. ರಾಘವೇಂದ್ರ ಹಿಟ್ನಾಳ, ಜನಾರ್ಧನ ರೆಡ್ಡಿ, ವಿಧಾನ ಪರಿಷತ್ ಸದಸ್ಯ ಶರಣೇಗೌಡ ಬಯ್ಯಾಪುರ, ಹೇಮಲತಾ ನಾಯಕ್, ಮಾಜಿ ಸಚಿವ ನಾಡಗೌಡ, ಮಾಜಿ ಶಾಸಕ ಪರಣ್ಣ ಮುನವಳ್ಳಿ, ಮುಖಂಡರಾದ ರಾಜಶೇಖರ ಹಿಟ್ನಾಳ, ಅಂದಾನಪ್ಪ ಅಗಡಿ ಸೇರಿದಂತೆ ಅನೇಕರಿದ್ದರು.

ಪಾದಯಾತ್ರಿಗಳಿಗೆ ಭಕ್ತರಿಂದ ಕುಷ್ಟಗಿ ರಸ್ತೆ, ಗದಗ ರಸ್ತೆ, ಹೊಸಪೇಟೆ ರಸ್ತೆ, ಸಿಂದೋಗಿ ರಸ್ತೆ ಸೇರಿದಂತೆ ಕೊಪ್ಪಳ ನಗರ ಪ್ರದೇಶದ ವಿವಿಧೆಡೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ, ಪಾದಯಾತ್ರೆ ನಿರತ ಭಕ್ತರನ್ನು ಸ್ವಾಗತಿಸಿದ್ದು ವಿಶೇಷವಾಗಿತ್ತು. ಶ್ರೀ ಗವಿಸಿದ್ಧೇಶ್ವರ ಕತೃ ಗದ್ದುಗೆ ದರ್ಶನಕ್ಕೆ ರಾತ್ರಿಯಿಂದಲೇ ಸರದಿಯಲ್ಲಿ ನಿಂತು ದರ್ಶನ ಪಡೆದು ಪುನೀತರಾದರು.

ಸಹಸ್ರಾರು ಭಕ್ತರಿಂದ ಶುಕ್ರವಾರ ರಾತ್ರಿಯಿಂದಲೇ ಗವಿಸಿದ್ದೇಶ್ವರ ಸ್ವಾಮಿಗೆ ದೀರ್ಘದಂಡ ನಮಸ್ಕಾರ ಸಲ್ಲಿಸಿ, ತಮ್ಮ ಇಷ್ಟಾರ್ಥ ಹರಕೆ ತೀರಿಸಿದರು. ಮಹಾ ದಾಸೋಹ ಭವನದಲ್ಲಿ ಜಾತ್ರೆಗೆ ಆಗಮಿಸಿದ್ದ ಲಕ್ಷಾಂತರ ಭಕ್ತರು ಪ್ರಸಾದ ಸೇವಿಸಿದರು.

> ಮಹಾ ಮಹಿಮ ಗವಿಸಿದ್ಧೇಶ್ವರನ ಜಾತ್ರಾ ಮಹೋತ್ಸವಕ್ಕೆ ಲಕ್ಷಾಂತರ ಭಕ್ತರು ಪಾದಯಾತ್ರೆ ಮೂಲಕ ಆಗಮಿಸಿದ್ದು ವಿಶೇಷವಾಗಿತ್ತು. ಕೊಪ್ಪಳ ಜಿಲ್ಲೆಯ ವಿವಿಧ ಗ್ರಾಮಗಳಿಂದ ರಾತ್ರಿಯಿಂದಲೇ ಪಾದಯಾತ್ರೆ ಬಂದ ಭಕ್ತರು, ಶ್ರೀ ಗವಿಸಿದ್ಧೇಶ್ವರನ ಕತೃ ಗದ್ದುಗೆಯ ದರ್ಶನ ಪಡೆದು ಪುನಿತರಾದರು. ಶನಿವಾರ ಸಂಜೆ ರಥೋತ್ಸವದ ಹಿನ್ನೆಲೆಯಲ್ಲಿ ಗ್ರಾಮೀಣ ಭಾಗದಿಂದ ಪಾದಯಾತ್ರಿಗಳ ಆಗಮನ ಇರುವೆಯ ಸಾಲಿನಂತೆ ಭಾಸವಾಗುತ್ತಿತ್ತು.

## ಕ್ರೀಡಾಪಟುಗಳಿಗೆ ಸನ್ಮಾನ



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಒಕ್ಕೂಟ, ಅಲ್ಯೂಮಿನಿಯಂ ಫ್ಯಾಬ್ರಿಕೇಟರ್ಸ್ ಸಂಘ ಹಾಗೂ ಕಾರ್ಮಿಕ ಕಲ್ಯಾಣ ಸಂಸ್ಥೆ ಗದಗ ಇವುಗಳ ಸಂಯುಕ್ತಾಶ್ರಯದಲ್ಲಿ ಕರಾಟೆಯಲ್ಲಿ ಆಲ್ ಇಂಡಿಯಾ-16 ಕ್ವಾಲಿಫೈಡ್‌ಆಗಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಕು. ಮಹಮ್ಮದಫರಹಾತ ನಾಗನೂರ ಹಾಗೂ ತುಮಕೂರಿನಲ್ಲಿ ನಡೆದ 7ನೇ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ದ್ವಿತೀಯ ಸ್ಥಾನ ಪಡೆದ ಮಹಮ್ಮದ ಜೋಹೆಬ್ ಮೈನುದ್ದೀನ ಗುಜಮಾಗಡಿ ಇವರಿಗೆ ಒಕ್ಕೂಟದ ಕಾರ್ಯಾಲಯದಲ್ಲಿ ಸಂಘದ ಎಲ್ಲ ಸದಸ್ಯರು ಹಾಗೂ ಪದಾಧಿಕಾರಿಗಳು ಸನ್ಮಾನಿಸಿ, ಅಭಿನಂದಿಸಿದರು.

ವೇದಿಕೆಯ ಮೇಲೆ ಕ್ರೀಡಾಪಟುಗಳಾದ ಮಹಮ್ಮದ ಫರಹಾತ ನಾಗನೂರ, ಮಹಮ್ಮದ ಜೋಹೆಬ್ ಮೈನುದ್ದೀನ ಗುಜಮಾಗಡಿ, ಕಾರ್ಮಿಕರ ಒಕ್ಕೂಟ ಹಾಗೂ ಕಾರ್ಮಿಕ ಕಲ್ಯಾಣ ಸಂಸ್ಥೆಯ ಅಧ್ಯಕ್ಷ ಮಹಮ್ಮದ

▶▶3ನೇ ಪುಟಕ್ಕೆ

### ಆಟೋ ಚಾಲಕ, ಮಾಲಕರ ಸಮಾವೇಶದ ಕುರಿತು ವೆಂಕನಗೌಡ ಗೋವಿಂದಗೌಡ್ರ ಮಾಹಿತಿ

# ವಿವಿಧ ಬೇಡಿಕೆಗಳ ಈಡೇರಿಕೆಗೆ ಹಕ್ಕೊತ್ತಾಯ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಗದಗ-ಬೆಟಗೇರಿ ಅವಳಿ ನಗರದಲ್ಲಿ ಆಟೋ ಚಾಲಕರು ಮತ್ತು ಮಾಲಕರ ಬೃಹತ್ ಸಮಾವೇಶವನ್ನು ಜ.28ರಂದು ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಜೆಡಿಎಸ್ ರಾಜ್ಯ ವಕ್ತಾರ, ಯಂಗ್ ಇಂಡಿಯಾ ಸಂಸ್ಥಾಪಕ ವೆಂಕನಗೌಡ ಗೋವಿಂದಗೌಡ್ರ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾನುವಾರ ಬೆಳಿಗ್ಗೆ 10 ಗಂಟೆಗೆ ತೋಂಟದಾರ್ಯ ಮಠದಿಂದ ಆಟೋ ಜಾಥಾ ಹೊರಡಲಿದೆ. ರಾಜ್ಯದ ಬೇರೆ ಬೇರೆ



ಜಿಲ್ಲೆಯ ಆಟೋ ಚಾಲಕರು ಈ ಮೆರವಣಿಗೆ ಮತ್ತು ಅಂಬೇಡ್ಕರ್ ಭವನದಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ಮಾಹಿತಿ ನೀಡಿದರು.

ಆಟೋ ಚಾಲಕ ಮತ್ತು ಮಾಲೀಕರ ಕಲ್ಯಾಣ ಮಂಡಳಿ ಸ್ಥಾಪನೆ ಮಾಡಬೇಕು. ಆಟೋ ಕಾಲನಿ ನಿರ್ಮಿಸಿ, ಆಶ್ರಯ ಮನೆ ಕೊಡಬೇಕು. ಆಟೋ ಚಾಲಕರ ಮಕ್ಕಳಿಗೆ ವಿಶೇಷ ವಿದ್ಯಾರ್ಥಿ ವೇತನ ನೀಡಬೇಕು. ಪ್ರಮುಖ ನಗರ, ಪಟ್ಟಣಗಳಲ್ಲಿ ಆಟೋ ನಿಲ್ದಾಣ ನಿರ್ಮಾಣ ಮಾಡಬೇಕು. ಆಟೋ ರಿಕ್ಷಾಗಳಿಗೆ ತೆರಿಗೆ ವಿನಾಯಿತಿ ನೀಡಬೇಕು. ರಾಜ್ಯದ ಎಲ್ಲ ಬಸ್ ನಿಲ್ದಾಣಗಳಲ್ಲಿ ಆಟೋ ನಿಲ್ದಾಣ ನಿರ್ಮಾಣ ಮಾಡಬೇಕು ಎನ್ನುವ ಹಕ್ಕೊತ್ತಾಯವನ್ನು ಈ ಸಮಾವೇಶದ ಮೂಲಕ ಮಾಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಆಟೋ ಚಾಲಕರು ಮತ್ತು ಮಾಲಕರ ಸಂಘದ ಪದಾಧಿಕಾರಿಗಳಾದ ವಿಜಯ ಕಲ್ಮನಿ, ಬಸವರಾಜ ಮನಗುಂಡಿ, ಮಂಜುನಾಥ ಅಗಸಿಮನಿ, ಪರಶುರಾಮ ಪೂಜಾರ, ಮಲ್ಲೇಶ ಮುಂಡರಗಿ ಮುಂತಾದವರು ಉಪಸ್ಥಿತರಿದ್ದರು.

> ರಾಜ್ಯದಲ್ಲಿ ಆಟೋ ಚಾಲಕರನ್ನು ಸರಕಾರ ಈವರೆಗೆ ಕಾರ್ಮಿಕರು ಎಂದು ಪರಿಗಣಿಸಿಲ್ಲ. ಕಟ್ಟಡ ನಿರ್ಮಾಣ ಕಾರ್ಮಿಕರಿಗಿಂತ ಆಟೋ ಚಾಲಕರು ಬದುಕು ಸಂಕಷ್ಟದಲ್ಲಿದೆ. ಆದ್ದರಿಂದ, ಸರಕಾರ ಕಟ್ಟಡ ಕಾರ್ಮಿಕರಿಗೆ ನೀಡುವ ಎಲ್ಲ ಸೌಲಭ್ಯಗಳನ್ನು ಆಟೋ ಚಾಲಕರಿಗೂ ನೀಡಬೇಕು ಎನ್ನುವ ಹಕ್ಕೊತ್ತಾಯದಿಂದ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ವೆಂಕನಗೌಡ ಗೋವಿಂದಗೌಡ್ರ ತಿಳಿಸಿದರು.

## ಬಿಎಸ್‌ಎನ್‌ಎಲ್‌ನಿಂದ ಪಾದಯಾತ್ರೆ, ಬೈಕ್ ರ‍್ಯಾಲಿ



■ವಿಜಯಸಾಕ್ಷಿ ಸುದ್ದಿ, ಗದಗ

ಪ್ರಜಾರಾಜ್ಯೋತ್ಸವದ ಪ್ರಯುಕ್ತ ಗದಗ ಬಿಎಸ್‌ಎನ್‌ಎಲ್‌ದಿಂದ ಗದಗ-ಬೆಟಗೇರಿ ಅವಳಿ ನಗರದಲ್ಲಿ ಪಾದಯಾತ್ರೆ, ಬೈಕ್ ರ‍್ಯಾಲಿ ಕೈಗೊಳ್ಳಲಾಯಿತು.

ಪ್ರಜಾರಾಜ್ಯೋತ್ಸವದ ನಿಮಿತ್ತ ಬಿಎಸ್‌ಎನ್‌ಎಲ್ ಗ್ರಾಹಕರಿಗೆ ನೀಡಲಿರುವ ಹೊಸ ಯೋಜನೆಗಳ ಮಾಹಿತಿ, ಉತ್ತಮ ಸೇವೆ, ಗ್ರಾಹಕರಿಗೆ ಲಾಭದೊಂದಿಗೆ ಹೆಚ್ಚು ಉಪಯುಕ್ತವಾಗುವ ಯೋಜನೆಗಳ ಬಗ್ಗೆ ವಿವರಿಸಲಾಯಿತು.

ಬಿಎಸ್‌ಎನ್‌ಎಲ್ ಗದಗ ಪ್ರಧಾನ ಕಚೇರಿಯಿಂದ ಆರಂಭಗೊಂಡ ಪಾದಯಾತ್ರೆ ಹಳೇ ಬಸ್‌ನಿಲ್ದಾಣ, ಮಾಳಶೆಟ್ಟಿ ಸರ್ಕಲ್, ಹುಯಿಲಗೋಳ ನಾರಾಯಣರಾವ್ ಸರ್ಕಲ್, ಮಹೇಂದ್ರಕರ ಸರ್ಕಲ್, ಮಹಾತ್ಮಾ ಗಾಂಧಿ ಸರ್ಕಲ್, ರೋಟರಿ ಸರ್ಕಲ್ ಮಾರ್ಗವಾಗಿ ಮರಳಿ ಕಚೇರಿಗೆ ಆಗಮಿಸಿತು. ಪಾದಯಾತ್ರೆ ಹಾಗೂ ಬೈಕ್ ರ‍್ಯಾಲಿಯ ಸಂದರ್ಭದಲ್ಲಿ, ಬಿಎಸ್‌ಎನ್‌ಎಲ್ ಗ್ರಾಹಕರಿಗೆ ನೀಡಲಿರುವ ಆಕರ್ಷಕ ಯೋಜನೆಗಳ ಮಾಹಿತಿಯುಳ್ಳ ಕರಪತ್ರಗಳನ್ನು ಹಂಚಲಾಯಿತು.

ಡಿಜಿಎಂ ರಾಜಕುಮಾರ ಆಸಂಗಿ, ಡಿಜಿಎಂ ಸತೀಶ ಆಸಂಗಿ, ಗದಗ ಎಜಿಎಂ ಎಚ್. ಎಫ್. ಶಿರಹಟ್ಟಿ, ಗದಗ ಶಹರ ಎಸ್‌ಡಿಇ ಭಗತ್‌ಸಿಂಗ್, ಗ್ರಾಮೀಣ ಜೆಟಿಓ ಮೆಹಬೂಬ ಅಮರಗೋಳ, ಫ್ರಾಂಚೈಸಿ ಅಸೋಶಿಯೇಶನ್‌ನ ರಾಜ್ಯ ಸಂಘಟನಾ ಕಾರ್ಯದರ್ಶಿ ರಫೀಕ್‌ಅಹ್ಮದ್ ಅಣ್ಣಿಗೇರಿ ಹಾಗೂ ತಂಡದವರು, ಬಿಎಸ್‌ಎನ್‌ಎಲ್ ಆಡಳಿತ-ಸಿಬ್ಬಂದಿ ವರ್ಗ, ನಿವೃತ್ತ ನೌಕರರು ಪಾಲ್ಗೊಂಡು ಬಿಎಸ್‌ಎನ್‌ಎಲ್ ಯೋಜನೆ-ಸೌಲಭ್ಯಗಳ ಮಾಹಿತಿ ನೀಡಿದರು.



## ದೇಶ ಹೆಮ್ಮೆಪಡುವ ಕೆಲಸ ಮಾಡಿ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಆ್ಯಂಗ್ಲೋ ಉರ್ದು ಬಾಲಕಿಯರ ಪ್ರೌಢಶಾಲೆಯಲ್ಲಿ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಜನಾಬ ಶಹನವಾಜ ಎಸ್.ಉಮಚಗಿ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಭಾರತದ ಸಂವಿಧಾನವು ಇಡೀ ವಿಶ್ವದಲ್ಲಿಯೇ ಅತೀ ದೊಡ್ಡದಾದ ಲಿಖಿತ ರೂಪದಲ್ಲಿರುವ ಸಂವಿಧಾನವಾಗಿದೆ. ಸಂವಿಧಾನದ ಆಶಯಕ್ಕೆ ತಕ್ಕಂತೆ ನಾವು ಬದುಕಿ ದೇಶ ಹೆಮ್ಮೆ ಪಡುವ ಕೆಲಸ ಮಾಡಬೇಕು ಹಾಗೂ ಡಾ. ಬಿ.ಆರ್. ಅಂಬೇಡ್ಕರವರು ಹೊಂದಿದ್ದ ಆದರ್ಶ ಹಾಗೂ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷ ಹಾಜಿ ಎ.ಎಮ್. ಸೌದಾಗರ, ಕಾರ್ಯದರ್ಶಿ ಜನಾಬ ಎಮ್.ಎಮ್. ಶೇಖ, ಸದಸ್ಯರಾದ ಹಾಜಿ ರಾಜೇಸಾಬ ಬಾಗಲಕೋಟ, ಪ್ರೊ. ಎ.ಎಮ್. ಮುಲ್ಲಾ, ಜನಾಬ ಜಿಲಾನಿ ಉಮಚಗಿ, ಜನಾಬ ಕೆ.ಎಮ್. ಶೇಖ, ಹಾಜಿ ಮೊಹಮ್ಮದ ಇಕ್ಬಾಲ ಹಣಗಿ, ಜನಾಬ ಸಯ್ಯದ ಇಸ್ಮಾಯಿಲ ಬಿಜಾಪೂರ, ಜನಾಬ ಮೊಹಮ್ಮದಯೂಸೂಫ ನರಗುಂದ, ಜನಾಬ ಇರ್ಫಾನ ಡಂಬಳ, ಜನಾಬ ಐ.ಎ. ಕಂಟ್ರಾಕ್ಟರ, ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಜನಾಬ ಎಲ್.ಆರ್. ಇಟಗಿ, ಎಲ್ಲ ಶಿಕ್ಷಕರು, ಸಿಬ್ಬಂದಿ ವರ್ಗದವರು, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಜನಾಬ ಝುಡ್.ಎ. ಮುಲ್ಲಾ ನಿರೂಪಿಸಿದರು. ಜನಾಬ ಎಮ್. ಎಮ್. ಪೀರಜಾದೆ ವಂದಿಸಿದರು.

### ಕರುನಾಡ ವರಕುವರ, ಮಹಾದಂಡನಾಯಕ ಕೆ.ಎಂ. ಕಾರ್ಯಪ್ಪ

# ಭಾರತದ ಮೊದಲ 'ಫೀಲ್ಡ್ ಮಾರ್ಷಲ್'

ಬ್ರಿಟಿಷರು ಅಖಂಡ ಭಾರತವನ್ನು ಧರ್ಮಾಧಾರಿತವಾಗಿ ಒಡೆದು ಎರಡು ದೇಶಗಳಾಗಿ ಮಾಡಿ ಪಾಕಿಸ್ತಾನವನ್ನು ಸೃಷ್ಟಿಸಿ ಹೋದ ಸಮಯ. ಭಾರತದ ನಂಬಿಕೆಯನ್ನು ತಲೆಕೆಳಗು ಮಾಡಿದ ಪಾಪಿ ಪಾಕಿಸ್ತಾನ ಕಾಶ್ಮೀರದ ವಿಷಯ ಮುಂದಿಟ್ಟುಕೊಂಡು ಭಾರತದ ಮೇಲೆ ದಂಡೆತ್ತಿ ಬಂದಾಗ ಭಾರತ ಸೇನೆ ಒಬ್ಬ ಮಹಾನ್ ವ್ಯಕ್ತಿಯ ನಾಯಕತ್ವದಲ್ಲಿ ಪಾಕಿಸ್ತಾನವನ್ನು ಬಡಿದು ಹಾಕಿ ಕಾಶ್ಮೀರವನ್ನು ಉಳಿಸಿಕೊಂಡಿದ್ದು ಈಗ ಇತಿಹಾಸ.

ಆದಾದ ನಂತರ ಬ್ರಿಟಿಷ್ ಅಧಿಕಾರಿಯಾಗಿದ್ದ ರಾಬ್ ಲಾಕ್‌ಹಾರ್ಟ್ ಬದಲಾಗಿ ಭಾರತದ ಪ್ರಥಮ ಸೇನಾ ಮುಖ್ಯಸ್ಥರನ್ನು ಆಯ್ಕೆ ಮಾಡಬೇಕಾದ ಅನಿವಾರ್ಯ ಸಂದರ್ಭ ಒದಗಿ ಬಂದ ಕಾರಣ ತುರ್ತು ಸಭೆಯೊಂದನ್ನು ಕರೆಯಲಾಯಿತು. ಜನರಲ್ ಲಾಕ್‌ಹಾರ್ಟ್ ಸಮಾನರಾದಂತಹ ಒಬ್ಬ ಸಮರ್ಥ ಮತ್ತು ಅನುಭವಿ ಸೇನಾಧಿಕಾರಿ ನಮ್ಮ ದೇಶದಲ್ಲಿ ಇಲ್ಲ ಎಂಬ ಮಾತು ಸಭೆಯಲ್ಲಿ ಕೇಳಿ ಬಂದಾಗ ನಖ ಶಿಖಾಂತ ಉರಿದ ಮೇಜರ್ ಜನರಲ್ ನಾಥುಸಿಂಗ್ ರಾಥೋಡ್ 'ಕಾಶ್ಮೀರದ ಯುದ್ಧದ ಸಮಯದಲ್ಲಿ ಸ್ವತಃ ಮುಂದೆ ನಿಂತು ಸೈನ್ಯವನ್ನು ಮುನ್ನಡೆಸಿ ಜಯವನ್ನು ತಂದಿತ್ತ ನಮ್ಮ ಹಿರಿಯ ಲೆಫ್ಟಿನೆಂಟ್ ಜನರಲ್ ಕಾರ್ಯಪ್ಪ ಅವರಿಗಿಂತ ಉತ್ತಮವಾದ ವ್ಯಕ್ತಿ ನಮ್ಮ ದೇಶವನ್ನು ಕಾಪಾಡಲು ಮತ್ತೊಬ್ಬರಿಲ್ಲ' ಎಂದು ಘಂಟಾ ಘೋಷವಾಗಿ ಘರ್ಜಿಸುತ್ತಾರೆ.

ಅಂತಹ ವೀರ ಕನ್ನಡಿಗನ, ಕೊಡಗಿನ ಕಲಿ, ಭಾರತ ಮಾತೆಯ ವರಪುತ್ರನ ಜನ್ಮದಿನ. ಇಡೀ ಭಾರತ ಅವರ 135ನೇ ಜನ್ಮ ಜಯಂತಿಯಂದು ಅತ್ಯಾಭಿಮಾನದಿಂದ ಸ್ಮರಿಸುತ್ತದೆ. ಸ್ವತಂತ್ರ ಭಾರತ ಸೈನ್ಯದ ಪ್ರಪ್ರಥಮ ಫೀಲ್ಡ್ ಮಾರ್ಷಲ್ ಮಹಾದಂಡನಾಯಕ, ಕೊದಂಡೆರ ಮಾದಪ್ಪ ಕಾರ್ಯಪ್ಪ ಅವರು ಭಾರತೀಯರ ಜನಮನದಲ್ಲಿ ಕಳಶಪ್ರಾಯರು. ಇವರು ನಮ್ಮ ಕರ್ನಾಟಕದ ಕೊಡಗಿನವರು ಎಂಬುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ.

ಕಾರ್ಯಪ್ಪನವರು 1899ರ ಜನವರಿ 28ರಂದು ಕೊಡಗಿನ ಶನಿವಾರ ಸಂತೆಯಲ್ಲಿ ಜನಿಸಿದರು. ತಂದೆ ಮಾದಪ್ಪನವರು ಕಂದಾಯ ಇಲಾಖೆಯಲ್ಲಿದ್ದರು. ಕಟ್ಟುನಿಟ್ಟಾಗಿ ಶಿಸ್ತನ್ನು ಪಾಲಿಸುವವರು. ತಾಯಿ ಕಾವೇರಿ. ಕಾರ್ಯಪ್ಪನವರು ತಮ್ಮ ಕೊನೆಯುಸಿರಿನವರೆಗೂ ಇವರಿಬ್ಬರನ್ನೂ ದೇವರಂತೆ ಪೂಜಿಸಿದರು. ಸಂಬಂಧಿಗಳೆಲ್ಲ ಕಾರ್ಯಪ್ಪನವರನ್ನು 'ಚಿಮ್ಮ' ಎಂದು ಕರೆಯುತ್ತಿದ್ದರು.




1918ರ ಮೊದಲನೆಯ ಮಹಾಯುದ್ಧ ಮುಗಿದಾಗ ಭಾರತೀಯರನ್ನೂ ಸೈನ್ಯಾಧಿಕಾರಿಗಳ ಸ್ಥಾನಕ್ಕೆ ಪರಿಗಣಿಸಲು ಕೂಗು ಕೇಳಿಬಂತು. ಮುಂದೆ ಮುಂಬಯಿಯಲ್ಲಿದ್ದ ಕಾರ್ನಾಟಿಕ್ ಪದಾತಿ ದಳಕ್ಕೆ ನಿಯುಕ್ತಿಗೊಂಡರು. ಕ್ವೆಟ್ಟಾ ಮಹಾವಿದ್ಯಾಲಯಕ್ಕೆ ಸೇರಿದ ಮೊದಲ ಭಾರತೀಯ ಎಂಬ ಗೌರವ ಕಾರ್ಯಪ್ಪನವರದು. ಮುಂದೆ 1946ರಲ್ಲಿ ಇವರಿಗೆ ಫ್ರಾಂ-ಟಿಯರ್ ಬ್ರಿಗೇಡ್ ದಳದ ಬ್ರಿಗೇಡಿಯರ್ ಆಗಿ ಭಡ್ತಿ ನೀಡಲಾಯಿತು.

1941-42ರ ಅವಧಿಯಲ್ಲಿ ಇರಾಕ್, ಸಿರಿಯಾ ಮತ್ತು ಇರಾನ್ ಪ್ರದೇಶಗಳಲ್ಲಿ, 1943-44ರಲ್ಲಿ ಬರ್ಮಾ, ವಝಿರಿಸ್ತಾನದಲ್ಲಿ ಸೈನಿಕನಾಗಿ ಸೇವೆ ಸಲ್ಲಿಸಿದ್ದಾರೆ. 1942ರಲ್ಲಿ ಇವರ ಸ್ವಾಧೀನಕ್ಕೆ ಒಂದು ತುಕಡಿಯನ್ನು ಒಪ್ಪಿಸಲಾಯಿತು. ಈ ಅಧಿಕಾರ ಪಡೆದ ಮೊದಲ ಭಾರತೀಯ ಅಧಿಕಾರಿ ಇವರು. ಅವರಿಗೆ 'ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್' ಎಂಬ ಗೌರವವೂ ಸಂದಿತು.

1953ರಲ್ಲಿ ಸೈನ್ಯದಿಂದ ನಿವೃತ್ತಿಯ ನಂತರದಲ್ಲಿ ಕಾರ್ಯಪ್ಪನವರು ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ದೇಶಗಳಿಗೆ ಭಾರತೀಯ ರಾಯಭಾರಿಯಾಗಿ ನಿಯೋಜಿಸಲ್ಪಟ್ಟಿದ್ದರು. ಬಹಳಷ್ಟು ದೇಶಗಳಲ್ಲಿನ ಸೈನ್ಯಗಳ ಸಂಘಟನೆಗಳ ಕಾರ್ಯದಲ್ಲಿ ಸೇವೆ ಸಲ್ಲಿಸಿದ್ದ ಕಾರ್ಯಪ್ಪ ಚೀನಾ, ಜಪಾನ್, ಅಮೆರಿಕ, ಬ್ರಿಟನ್ ಮತ್ತು ಬಹುತೇಕ ಯೂರೋಪ್ ರಾಷ್ಟ್ರಗಳಲ್ಲಿಯೂ ಕಾರ್ಯಾಚರಿಸಿದ್ದಾರೆ.

1937ರಲ್ಲಿ ಸಿಕಂದರಬಾದ್‌ನ ಅರಣ್ಯಾಧಿಕಾರಿಯೊಬ್ಬರ ಮಗಳಾದ ಮುತ್ತು ಮಾಚಿಯಾ ಎಂಬವವರನ್ನು ವಿವಾಹವಾದ ಇವರಿಗೆ ನಂದಾ ಕಾರ್ಯಪ್ಪ ಎಂಬ ಪುತ್ರ ಮತ್ತು ನಳಿನಿ ಕಾರ್ಯಪ್ಪ ಎಂಬ ಪುತ್ರಿ ಇದ್ದಾರೆ. ಅವರ ಮಗ ನಂದಾ ಭಾರತೀಯ ವಾಯುಸೇನೆಯಲ್ಲಿ ಏರ್ ಮಾರ್ಷಲ್ ಹುದ್ದೆಗೆ ಏರಿದರು. ದುರದೃಷ್ಟವಶಾತ್ ನಂತರ ಮೂರೇ ವರ್ಷಗಳಲ್ಲಿ ಮುತ್ತು ಅವರು ಅಪಘಾತವೊಂದರಲ್ಲಿ ತೀರಿ-ಕೊಂಡರು. ನಂದಾ ಕಾರಿಯಪ್ಪ ಅವರೂ ಸೇನೆಗೆ ಸೇರಿಕೊಂಡು ಏರ್ ಮಾರ್ಷಲ್ ಆಗಿ ನಿವೃತ್ತರಾದರು.

1962, 1965, 1971ರಲ್ಲಿ ಯುದ್ಧಗಳಾದಾಗ ಕಾರ್ಯಪ್ಪನವರು ಗಡಿಯಲ್ಲಿ ಸಂಚರಿಸಿ ಭಾರತೀಯ ಸೈನ್ಯಕ್ಕೆ ಸ್ಫೂರ್ತಿ ತುಂಬುವ ಕೆಲಸ ಮಾಡಿದ್ದರು. 1983ರಲ್ಲಿ ಕಾರ್ಯಪ್ಪನವರ ಉತ್ಕೃಷ್ಟ ಸೇವೆಯ ಸ್ಮರಣಾರ್ಥವಾಗಿ ಭಾರತ ಸರಕಾರ ಅವರಿಗೆ 'ಫೀಲ್ಡ್ ಮಾರ್ಷಲ್' ಗೌರವವನ್ನು ಸಮರ್ಪಿಸಿತು. ಕಾರ್ಯಪ್ಪನವರು ತಮ್ಮ ನಿವೃತ್ತಿಯ ಬಹಳಷ್ಟು ವರ್ಷಗಳನ್ನು ಮಡಿಕೇರಿಯ ಸುಂದರ ಪರಿಸರದಲ್ಲಿ ಕಳೆದರು. ಸ್ವತಃ ಪ್ರಕೃತಿ ಪ್ರೇಮಿಯಾದ ಕಾರ್ಯಪ್ಪನವರು ಜನರಿಗೆ ಪ್ರಕೃತಿ ಪ್ರೇಮ, ಸ್ವಚ್ಛತೆ ಮತ್ತು ಬದುಕಿನ ಹಲವಾರು ಸೌಂದರ್ಯ ವಿಚಾರಗಳ ಕುರಿತಾದ ಶಿಕ್ಷಣ ನೀಡುವ ಕೆಲಸವನ್ನು ಸಾಂಗವಾಗಿ ನಡೆಸಿದರು. 94 ವರ್ಷಗಳ ಸಾರ್ಥಕ ಜೀವನವನ್ನು ಭಾರತಮಾತೆಗೆ ಸಮರ್ಪಿಸಿದ ಕಾರ್ಯಪ್ಪನವರು ಮೇ 15, 1993ರಂದು ಬೆಂಗಳೂರಿನಲ್ಲಿ ನಿಧನರಾದರು.



– ಈಶ್ವರ ಎಸ್.ಮೆಡ್ಲೇರಿ.
ಅಧ್ಯಕ್ಷರು, ಕಸಾಪ-ಲಕ್ಷ್ಮೇಶ್ವರ.

## ಬಾಪೂಜಿ ಶಾಲೆಯಲ್ಲಿ ಗಣರಾಜ್ಯೋತ್ಸವ ಆಚರಣೆ



■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಇಲ್ಲಿಯ ಲಕ್ಕುಂಡಿ ಗ್ರಾಮೀಣ ವಿದ್ಯಾವರ್ಧಕ ಸಂಸ್ಥೆಯ ಬಾಪೂಜಿ ಕಿರಿಯ ಪ್ರಾಥಮಿಕ ಶಾಲೆ ಲಕ್ಕುಂಡಿ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಂ-1 ಇವರ ಸಂಯುಕ್ತ ಆಶ್ರಯದಲ್ಲಿ 75ನೇ ಗಣರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಿಂಗಪ್ಪ ಗಡಗಿ ಧ್ವಜಾರೋಹಣವನ್ನು ನೆರವೇರಿಸಿದರು. ನಿರ್ದೇಶಕರಾದ ಫಕ್ಕಿರಪ್ಪ ಕಲಬಂಡಿ, ದೇವಪ್ಪ ಖಂಡು, ಶಿವನಗೌಡ ರೋಣದ, ವೀರಪ್ಪ ಗಾರವಾಡ, ರಮೇಶ ಹೊಸಮನಿ, ಲಕ್ಷ್ಮಣ ಗುಡಗೇರಿ, ಬಾಳಪ್ಪ ನಿಡಗುಂದಿ, ನೀಲಪ್ಪ ಗಡಗಿ, ಯಮನೂರಾಸಾಬ ನದಾಫ, ಶೇಖರಗೌಡ ರೋಣದ, ಅಂದಯ್ಯ ನರಗುಂದಮಠ, ಶಂಕರಗೌಡ ಬೇಲೇರಿ ಮತ್ತು ಬಾಪೂಜಿ ಶಾಲೆಯ ಮುಖ್ಯ ಶಿಕ್ಷಕಿ ಆರ್.ಬಿ. ಬರದ್ವಾಡ, ಹಿರಿಯ ಶಿಕ್ಷಕ ಬಸವರಾಜ ಗರ್ಜಪ್ಪನವರ, ಎಫ್.ಬಿ. ಬರದ್ವಾಡ, ರುದ್ರಮ್ಮ ಹಿರೇಮಠ, ಎ.ಎಂ. ದಂಡಿನ, ಸಂಗೀತಾ ತಡಹಾಳ, ಸಹಕಾರ ಸಂಘದ ವ್ಯವಸ್ಥಾಪಕ ಶರಣಪ್ಪ ಗರ್ಜಪ್ಪನವರ, ಇಸ್ಮಾಯಿಲ್ ಕೊರ್ಲಹಳ್ಳಿ ಹಾಗೂ ಪಾಲಕರು, ಸಾರ್ವಜನಿಕರು ಉಪಸ್ಥಿತರಿದ್ದರು.

ಎಸ್.ಎಚ್. ತಡಹಾಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಎಸ್.ವಿ. ಗರ್ಜಪ್ಪನವರ ಸ್ವಾಗತಿಸಿದರು. ಶ್ರೀದೇವಿ ಗರ್ಜಪ್ಪನವರ ಸ್ವಾಗತ ಗೀತೆ ಹಾಡಿದಳು. ರಫಿಯಾ ದಂಡಿನ ನಿರೂಪಿಸಿದರು. ಬಿ.ಆಯ್. ಗರ್ಜಪ್ಪನವರ ವಂದಿಸಿದರು.

### ಉಮಾವಿದ್ಯಾಲಯ ಹೈಸ್ಕೂಲ್ ಮೈದಾನದಲ್ಲಿ ತಾಲೂಕಾಡಳಿತದಿಂದ ಗಣರಾಜ್ಯೋತ್ಸವ

# ಸಂವಿಧಾನದ ಆಶೋತ್ತರಗಳಿಗೆ ಬದ್ಧರಾಗಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸಾರ್ವಭೌಮ, ಜಾತ್ಯಾತೀತ, ಭ್ರಾತೃತ್ವ, ಸಮಾನತೆಯನ್ನೊಳಗೊಂಡ ಶ್ರೇಷ್ಠ ಪ್ರಜಾಪ್ರಭುತ್ವ ಹೊಂದಿದ ಭಾರತದ ಅಭಿವೃದ್ಧಿಗೆ ಎಲ್ಲರೂ ಸಂವಿಧಾನದ ಆಶಯ ಅರಿತು, ನಾವೆಲ್ಲ ಭಾರತ ಮಾತೆಯ ಮಕ್ಕಳು ಎಂಬ ಭಾವನೆಯೊಂದಿಗೆ ಮುನ್ನಡೆಯೋಣ ಎಂದು ತಹಸೀಲ್ದಾರ ವಾಸುದೇವ ಸ್ವಾಮಿ ಹೇಳಿದರು.

ಅವರು ಶುಕ್ರವಾರ ಪಟ್ಟಣದ ಉಮಾವಿದ್ಯಾಲಯ ಹೈಸ್ಕೂಲ್ ಮೈದಾನದಲ್ಲಿ ತಾಲೂಕಾಡಳಿತದಿಂದ ಹಮ್ಮಿಕೊಳ್ಳಲಾಗಿದ್ದ 75ನೇ ಗಣರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ವಿವಿಧತೆಯಲ್ಲಿ ಏಕತೆ ಹೊಂದಿರುವ ಸಾಂಸ್ಕೃತಿಕ ಪರಂಪರೆಯ ಭಾರತವೀಗ ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿ ಪಥದತ್ತ ಸಾಗುತ್ತಿದೆ. ಪ್ರತಿಯೊಬ್ಬ ನಾಗರಿಕನೂ ಸಂವಿಧಾನದ ಆಶೋತ್ತರಗಳಿಗೆ ಬದ್ಧವಾಗಿ ತನ್ನ ಹಕ್ಕು-ಬಾಧ್ಯತೆಯ ಜತೆಗೆ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಪಾಲಿಸಬೇಕಾಗಿದೆ ಎಂದು ಹೇಳಿದರು.

ತಾ.ಪಂ ಇಓ ಕೃಷ್ಣಪ್ಪ ಧರ್ಮರ ಮಾತನಾಡಿ, ವಿವಿಧತೆ ಹೊಂದಿರುವ ದೇಶದಲ್ಲಿ ಸಮಾನತೆ, ಸಾರ್ವಭೌಮತ್ವ, ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ಭಾವನೆಯನ್ನು ತರುವ ಉದ್ದೇಶದಿಂದ ಅಂಗೀಕಾರವಾದ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವ ಆದರ್ಶ ಗಣರಾಜ್ಯದ ಸಂಕಲ್ಪಕ್ಕೆ ಎಲ್ಲರೂ ಕೈಜೋಡಿಸೋಣ ಎಂದರು.



ಧ್ವಜಾರೋಹಣದ ಬಳಿಕ ಮೈದಾನದಲ್ಲಿ ಸೇರಿದ್ದ ಪೊಲೀಸ್, ಎನ್‌ಸಿಸಿ ಹಾಗೂ ಪಟ್ಟಣದ ಶಾಲಾ ವಿದ್ಯಾರ್ಥಿಗಳಿಂದ ಆಕರ್ಷಕ ಪಥ ಸಂಚಲನ ಜರುಗಿತು. ಪಿಎಸ್‌ಐ ವಿಜಯ.ಜಿ ಪವಾರ ಪಥಸಂಚಲನ ನೆರವೇರಿಸಿದರು. ಪಥ ಸಂಚಲನದಲ್ಲಿ ಎಸ್‌ಟಿಪಿಎಂಬಿ ಆಂಗ್ಲ ಮಾಧ್ಯಮ (ಪ್ರಥಮ), ದಿ.ಯೂನಿಕ್ ಶಾಲೆ(ದ್ವಿತೀಯ)ಬಿಸಿಎನ್ ಹೈಸ್ಕೂಲ್ (ತೃತೀಯ) ಸ್ಥಾನ ಪಡೆಯಿತು.

ಈ ವೇಳೆ ಬಿ.ಡಿ. ತಟ್ಟಿ ಶಾಲೆಯ ವಿಕಲಚೇತನ ವಿದ್ಯಾರ್ಥಿಗಳು ಸೇರಿದಂತೆ ವಿವಿಧ ಶಾಲೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಕಣ್ಮನ ಸೆಳೆದವು. ಚಂದನ ಶಾಲೆಯ ವಿದ್ಯಾರ್ಥಿಗಳು ಬ್ಯಾಂಡ್ ಮೂಲಕ ರಾಷ್ಟ್ರಗೀತೆ ನುಡಿಸಿದರು. ಫೀನಿಕ್ಸ್ ಶಾಲೆಯ ಮಕ್ಕಳು ರಾಷ್ಟ್ರಗೀತೆ, ನಾಡಗೀತೆ ಹಾಡಿದರು.

ವೇದಿಕೆಯ ಪುರಸಭೆ ಸದಸ್ಯ ರಾಜೀವ ಕುಂಬಿ, ಪ್ರವೀಣ ಬಾಳಿಕಾಯಿ, ಉಪತಹಸೀಲ್ದಾರ ಪ್ರಶಾಂತ ಕಿಮಾಯಿ, ಮಂಜುನಾಥ ಅಮಾಸಿ, ಡಾ. ಎನ್.ಎಂ. ಹವಳದ, ಚಂದ್ರಶೇಖರ ನರಸಮ್ಮನವರ, ಎಸ್. ಕೆ. ಜಲರೆಡ್ಡಿ, ನಿಜಲಿಂಗಪ್ಪ ತೋಟದ, ಶಿವಾನಂದ ಮಠದ, ಡಾ. ಬಿ.ಎಸ್. ಹಿರೇಮಠ, ಕಂದಾಯ ನಿರೀಕ್ಷಕ ಬಿ.ಎಂ. ಕಾತರಾಳ, ವಿ.ಆಯ್. ಪೂಜಾರ, ಶಿವಾನಂದ ಬಾನಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಶಾಲೆಗಳ ಶಿಕ್ಷಕವೃಂದ ಪಾಲ್ಗೊಂಡಿದ್ದರು. ನಿರ್ಮಲಾ ಕೊಪ್ಪದಮಠ ಸ್ವಾಗತಿಸಿದರು. ಬಿಆರ್‌ಪಿ ಈಶ್ವರ ಮೆಡ್ಲೇರಿ, ಸಿಆರ್‌ಪಿ ಸತೀಶ ಬೋಮಲೆ, ಉಮೇಶ ನೇಕಾರ, ಎನ್.ಎ. ಮುಲ್ಲಾ ನಿರ್ವಹಿಸಿದರು.

ಚಿತ್ರಕಲಾ ಸ್ಪರ್ಧೆಯಲ್ಲಿ ಪಿಎಸ್‌ಬಿಡಿ ಬಾಲಕಿಯರ ಪ್ರೌಢಶಾಲೆಯ ರೋಹಿಣಿ ಬೆಟಗೇರಿ(ಪ್ರಥಮ), ಸೆವೆಂಥ್ ಡೇ ಶಾಲೆಯ ಲಾವಣ್ಯ ಸುವರ್ಣಕರ(ದ್ವಿತೀಯ), ಎಸ್‌ಟಿಪಿಎಂಬಿಯ ಖದೀಜಾ ಸೂರಣಗಿ(ತೃತೀಯ), ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಪಿಎಸ್‌ಬಿಡಿ ಬಾಲಕಿಯರ ಪ್ರೌಢಶಾಲೆ(ಪ್ರಥಮ), ಆಕ್ಸಫರ್ಡ್ ಶಾಲೆ(ದ್ವಿತೀಯ), ಕಲಾಂ ಶಾಲೆ(ತೃತೀಯ), ವೇಷಭೂಷಣ ಸ್ಪರ್ಧೆಯಲ್ಲಿ ಸರಕಾರಿ ಪ್ರಾಥಮಿಕ ಶಾಲೆ ನಂ-4ರ ಸ್ಫೂರ್ತಿ ಚರ್ಕಸಾಲಿ(ಪ್ರಥಮ), ಸ.ಕಿ.ಪ್ರಾ. ಶಾಲೆ ರಂಭಾಪುರಿ ನಗರದ ನೀಲಮ್ಮ ಪಾಟೀಲ(ದ್ವಿತೀಯ), ಲಿಟಲ್ ಹಾರ್ಟ್ ಶಾಲೆಯ ಲಕ್ಷ್ಮೀ ಸೂರಣಗಿ(ತೃತೀಯ) ಸ್ಥಾನ ಪಡೆದರು.

### ಎಂ.ಜಿ. ಚಾರಿಟೇಬಲ್ ಟ್ರಸ್ಟ್ ಹಾಗೂ ಅಬುಹುರೇರಾ ಮಸ್ಜಿದ್ ಸಂಯುಕ್ತ ಆಶ್ರಯದಲ್ಲಿ

# ಗಂಗಿಮಡಿಯಲ್ಲಿ ಗಣರಾಜ್ಯೋತ್ಸವ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಗಂಗಿಮಡಿಯ ಆಶ್ರಯ ಕಾಲೋನಿಯಲ್ಲಿ ಎಂ.ಜಿ. ಚಾರಿಟೇಬಲ್ ಟ್ರಸ್ಟ್ ಹಾಗೂ ಅಬುಹುರೇರಾ ಮಸ್ಜಿದ್ ಸಂಯುಕ್ತ ಆಶ್ರಯದಲ್ಲಿ 75ನೇ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಅಬುಹುರೇರಾ ಮಸ್ಜಿದ್‌ನ ಅಧ್ಯಕ್ಷ ಹಾಜಿ ಹುಸೇನ್‌ಸಾಬ ಪಲ್ಲೇದ ನೆರವೇರಿಸಿದರು.

ಈ ಸಂದರ್ಭದಲ್ಲಿ ಟ್ರಸ್ಟ್‌ನ ಕಾರ್ಯದರ್ಶಿ ಮೌಲಾನಾ ಅಬ್ದುಲ್ ಗಫುರ್ ಪಲ್ಲೇದ, ಮಸ್ಜಿದ್ ಕಾರ್ಯದರ್ಶಿ ಮಹಮ್ಮದ್‌ಸಾಬ ಬೋದ್ಲೇಖಾನ್, ಅಹಮ್ಮದ್ ಹೊಸಮನಿ, ಬಾಬಾಜಾನ್ ಕೊಡತಗೇರಿ, ಅಹಮ್ಮದ್ ಕಲೆಗಾರ, ಮೈನುದ್ದಿನ ಗುಜಮಾಗಡಿ, ಸಿಕಂದರ ಶಿರಹಟ್ಟಿ, ಮುಸ್ತಫಾ, ಹಾಫಿಜ್ ರೋಣ, ಅನ್ವರ್‌ಸಾಬ ಮುಳಗುಂದ, ಖಲಿಲ್ ಮುಳಗುಂದ ಮುಂತಾದವರು ಉಪಸ್ಥಿತರಿದ್ದರು.

# ಪಿಎಸ್‌ಬಿಡಿ ವಿದ್ಯಾರ್ಥಿಗಳ ಸಾಧನೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸ್ಥಳೀಯ ಪಿಎಸ್‌ಬಿಡಿ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿ ರೋಹಿಣಿ ಬೆಟಗೇರಿ ತಾಲೂಕು ಆಡಳಿತ ವತಿಯಿಂದ ಜರುಗಿದ ಗಣರಾಜ್ಯೋತ್ಸವದ ನಿಮಿತ್ತ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ರಾಷ್ಟ್ರೀಯ ಮತದಾರರ ದಿನಾಚರಣೆಯ ಕಾರ್ಯಕ್ರಮದಲ್ಲಿ ಸ್ವೀಪ್ ಕಾರ್ಯಕ್ರಮದಡಿ ಪೋಸ್ಟರ್ ಡಿಸೈನಿಂಗ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ, ಸ್ವಾಮಿ ವಿವೇಕಾನಂದರ ಜಯಂತ್ಯುತ್ಸವ ಪ್ರಯುಕ್ತ ನಡೆದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾಳೆ.



ತಾಲೂಕಾಡಳಿತ ವತಿಯಿಂದ ಜರುಗಿದ 75ನೇ ಗಣರಾಜ್ಯೋತ್ಸವದ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಾಮೂಹಿಕ ನೃತ್ಯದಲ್ಲಿ ಪ್ರಥಮ ಸ್ಥಾನ ಪಡೆದ ಪವಿತ್ರಾ ಜಗದಮನಿ ಹಾಗೂ ಸಂಗಡಿಗರಿಗೆ ಮುಖ್ಯ ಶಿಕ್ಷಕರಾದ ಜೆ.ಡಿ. ಲಮಾಣಿ ಅಭಿನಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ನಿರ್ಮಲಾ ಗೌರಿ, ಎಂ.ಸಿ. ಹಿರೇಮಠ, ಶೀಲಾ ತಳವಾರ, ಎಸ್. ಎಸ್. ಮಠದ, ಆರ್.ಸಿ. ಉಮಚಗಿ, ಎಸ್.ಎಂ. ಹಾದಿಮನಿ, ಪಿ.ಎಲ್. ಪಾಟೀಲ, ಶ್ವೇತಾ ಅಂಬಲಿ ಇದ್ದರು.

# ಹಕ್ಕುಗಳೊಂದಿಗೆ ಕರ್ತವ್ಯ ನಿರ್ವಹಣೆಯೂ ಮುಖ್ಯ



■ವಿಜಯಸಾಕ್ಷಿಸುದ್ದಿ, ಬಾಳೆಹೊನ್ನೂರು

ಪ್ರತಿಯೊಬ್ಬರೂ ದೇಶಾಭಿಮಾನ ಬೆಳೆಸಿಕೊಂಡು ಸಂವಿಧಾನ ನೀಡಿದ ಹಕ್ಕುಗಳ ಜೊತೆಗೆ ತಮ್ಮ ಪಾಲಿನ ಕರ್ತವ್ಯ ನಿರ್ವಹಿಸುವುದು ಅತೀ ಮುಖ್ಯವಾಗಿದೆ ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ಶ್ರೀ ರಂಭಾಪುರಿ ಪೀಠದ ಶ್ರೀ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಪ್ರತಿಷ್ಠಾನದ ಶ್ರೀ ವೀರಭದ್ರಸ್ವಾಮಿ ವಸತಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಶ್ರೀ ಜಗದ್ಗುರು ರುದ್ರಮುನೀಶ್ವರ ವಸತಿ ಪ್ರೌಢಶಾಲೆಯ ಆವರಣದಲ್ಲಿ 75ನೇ ಗಣರಾಜ್ಯೋತ್ಸವ ಧ್ವಜಾರೋಹಣ ನೆರವೇರಿಸಿ ಆಶೀರ್ವಚನ ನೀಡುತ್ತಿದ್ದರು.

ಭಾರತ ಅತ್ಯಂತ ವಿಶಾಲವಾದ ದೇಶವಾಗಿದ್ದು ಹಲವಾರು ಧರ್ಮ, ಭಾಷೆ ಮತ್ತು ಜನಾಂಗ ಹೊಂದಿದೆ. ವಿವಿಧತೆಯಿದ್ದರೂ ಎಲ್ಲರೂ ಏಕತೆಯಿಂದ ಬಾಳುವುದು ಭಾರತೀಯ ಸಂಸ್ಕೃತಿಯಾಗಿದೆ. ಬೆಳೆಯುವ ಮಕ್ಕಳಲ್ಲಿ ಅದ್ಭುತ ಶಕ್ತಿಯಿದ್ದು ಅವರಲ್ಲಿ ದೇಶಭಕ್ತಿ ಮತ್ತು ರಾಷ್ಟ್ರಾಭಿಮಾನ ಮೂಡಿಸುವ ಅವಶ್ಯಕತೆಯಿದೆ. ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಬೆಳೆಸಲು ಪ್ರಾಮಾಣಿಕ ಪ್ರಯತ್ನ ಮಾಡುವ ಅವಶ್ಯಕತೆಯಿದೆ ಎಂದರು.

ದುಗ್ಲಿ-ಕಡೇನಂದಿಹಳ್ಳಿ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪೀಠದ ಆಡಳಿತಾಧಿಕಾರಿ ಎಸ್.ಬಿ. ಹಿರೇಮಠ, ಸಂಪರ್ಕಾಧಿಕಾರಿ ಪ್ರಭುದೇವ ಕಲ್ಮಠ ಸೇರಿದಂತೆ ಅನೇಕ ಗಣ್ಯರು, ಶಾಲಾ ಶಿಕ್ಷಕರು ಉಪಸ್ಥಿತರಿದ್ದರು. ಶಿಕ್ಷಕ ನಿಜಗುಣಿ ಕಟ್ಟೇಗೌಡ್ರ ಧ್ವಜಾರೋಹಣ ಪ್ರಕ್ರಿಯೆಗೆ ನೆರವು ನೀಡಿದರು. ಶಿಕ್ಷಕ ವೀರೇಶ ಕುಲಕರ್ಣಿ ನಿರೂಪಿಸಿದರು.

# ಕಣಗಿನಹಾಳ ರೈಲ್ವೆ ನಿಲ್ದಾಣ ಮರುನಾಮಕರಣಕ್ಕೆ ಒತ್ತಾಯ

■ವಿಜಯಸಾಕ್ಷಿ ಸುದ್ದಿ, ಗದಗ

ಕಣಗಿನಹಾಳ ರೈಲ್ವೆ ನಿಲ್ದಾಣಕ್ಕೆ ದಿ. ಶ್ರೀ ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲರ ಹೆಸರು ಮರು ನಾಮಕರಣ ಮಾಡಬೇಕೆಂದು ನಿ. ನೆರವು ಪತ್ತಿನ ಸಹಕಾರ ಸಂಘದ ಮುಖ್ಯ ಪ್ರವರ್ತಕರು ಹಾಗೂ ಅರಿವು ಫೌಂಡೇಶನ್ ಅಧ್ಯಕ್ಷ ವಿಶ್ವನಾಥ ಶೀರಿಯವರು ಒತ್ತಾಯಿಸಿದರು.

ಸಂಘದ ಆವರಣದಲ್ಲಿ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲ ಪರಿಕಲ್ಪನೆಯಲ್ಲಿ ದೇಶಾದ್ಯಂತ ಇಂದು ಸಾವಿರಾರು ಪತ್ತಿನ ಸಹಕಾರಿ ಸಂಘಗಳು ತಮ್ಮ ಕಾರ್ಯಗಳ ಮೂಲಕ ಅವರ ಸದಾಶಯವನ್ನು ಜೀವತವಾಗಿರಿಸಿದ್ದು, ಅವರಿಗೆ ಸಂದ ಗೌರವವಾಗಿದೆ. ಅವರು ಹೆಸರು ಇಂದು ಸಹಕಾರ ಸಪ್ತಾಹ ಹಾಗೂ ಪತ್ತಿನ ಸಹಕಾರಿ ಸಂಘಗಳಲ್ಲಿ ಭಾವಚಿತ್ರಕ್ಕೆ ಮಾತ್ರ ಸೀಮಿತವಾಗಿದೆ. ಅವರ ಹೆಸರು ಅಜರಾಮರವಾಗಿಸಲು ಗಮನ ನೀಡಬೇಕೆಂದು ಆಶಯ



ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಂಘದ ಸದಸ್ಯರಾದ ದಾನೇಶ ತಡಸದ, ಗಗನ ಗೋಕಾವಿ, ಅನಿಲ ಶೆಟ್ಟರ, ವಿಶ್ವನಾಥ ಇಟಗಿ, ಶರಣೇಶ ಇಟಗಿ, ಶಂಕರ ಕಾರದಕಟ್ಟಿ, ನಾಗರಾಜ ಬೇವಿನಮರದ, ಕಿರಣ ಕಬಾಡಿ, ಅನಿಲ ಗದುಗಿನ ಹಾಗೂ ಅರಿವು ಫೌಂಡೇಶನ್ ಪದಾಧಿಕಾರಿಗಳಾದ ಶಿವಕುಮಾರಗೌಡ ಪಾಟೀಲ, ಯಶವಂತ ಕೌಜಗೇರಿ, ಶ್ರೀಶೈಲ ತಡಸದ, ಸದಸ್ಯರಾದ ವಿಶ್ವನಾಥ ಅಂಗಡಿ, ಶ್ರೀಕಾಂತ ಜವಳಿ, ವಿಶ್ವನಾಥ ಶಿರಗಣ್ಣನವರ ಮುಂತಾದವು ಉಪಸ್ಥಿತರಿದ್ದರು.

## ಗದಗ ತಾಲೂಕಾ ಕಸಾಪ ವತಿಯಿಂದ ಕರ್ನಾಟಕ ಸಂಭ್ರಮ-50ರ ಸರಣಿ ಕಾರ್ಯಕ್ರಮ


# ಬದುಕಿನ ಹಿನ್ನೆಲೆಯೇ ಸಾಧನೆಗೆ ಪೂರಕ

■ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ನಾಮಕರಣ ಸುವರ್ಣ ಸಂಭ್ರಮ-50ರ ಕಾರ್ಯಕ್ರಮದಡಿ 8ನೇ ಸರಣಿಯನ್ನು ಬಸವೇಶ್ವರ ನಗರದ ಆನಂದ ಮಿಣಜಗಿ ಇವರ ಮನೆಯಲ್ಲಿ ಹಮ್ಮಿಕೊಂಡಿತ್ತು.

ಅಥಿಗಳಾಗಿ ನಿವೃತ್ತ ಪ್ರಾಚಾರ್ಯ ಎಚ್.ಕೆ. ಬೇಲೂರ, ನಗರಸಭೆಯ ಸದಸ್ಯರಾದ ಚಂದ್ರಶೇಖರ ತಡಸದ, ನಿವೃತ್ತ ವಲಯ ಅರಣ್ಯಾಧಿಕಾರಿ ಮಹೇಶ್ವರ ಅಮೃತಪ್ಪ ಬಣಗಾರ, ಬಸವೇಶ್ವರ ನಗರದ ವೀರಭದ್ರೇಶ್ವರ ದೇವಸ್ಥಾನದ ಧರ್ಮದರ್ಶಿ ಶಿವಪುತ್ರಪ್ಪ ಬೇವಿನಮರದ ಆಗಮಿಸಿದ್ದರು. ಕನ್ನಡ ರಂಗಭೂಮಿಗೆ ಕೊಡುಗೆ ನೀಡಿದ ಗದುಗಿನ ಎಚ್. ಎನ್. ಹೂಗಾರ ಅವರ ಜೀವನ ಮತ್ತು ಸಾಧನೆಗಳನ್ನು ಪಿ.ಪಿ.ಜೆ ಮಹಾವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕ ಪ್ರೊ. ಅಂಬಾದಾಸ್ ಜಮಾದಾರ ಅವರು ನೆನೆದರು.

ಅಧ್ಯಕ್ಷತೆ ವಹಿಸಿದ್ದ ಡಾ. ರಶ್ಮಿ



ಅಂಗಡಿ ಮಾತನಾಡಿ, ಕನ್ನಡ ರಂಗಭೂಮಿ ಮತ್ತು ಸಿನಿಮಾ ರಂಗದಲ್ಲಿ ಕಥೆಗಳನ್ನು-ನಾಟಕಗಳನ್ನು ಬರೆದ ಎಚ್.ಎನ್. ಹೂಗಾರ ಅವರನ್ನು ಗದಗ ಸಾಂಸ್ಕೃತಿಕ ರಂಗ ಎಂದಿಗೂ ಮರೆಯಬಾರದು ಎಂದರು.

ದಿ. ರಾಚಪ್ಪ ಮಿಣಜಗಿ ಅವರ ಪುತ್ರಿ ಜ್ಯೋತಿ ಹೇರಲಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಹಿರಿಯರಾದ ಶಿವಪುತ್ರಪ್ಪ ಬೇವಿನಮರದ, ಚಂದ್ರಶೇಖರ ತಡಸದ, ಪ್ರೊ. ಅಂಬಾದಾಸ್ ಜಮಾದಾರ, ಆನಂದ ಮಿಣಜಗಿ ಅವರನ್ನು ಸನ್ಮಾನಿಸಲಾಯಿತು. ಶರತ್ ಚಳ್ಳಮರದ ಪ್ರಾರ್ಥಿಸಿದರು. ಗದಗ ತಾಲೂಕ ಕ.ಸಾ.ಪ ಉಪಕಾರ್ಯದರ್ಶಿ ಡಿ.ಎಸ್. ನಾಯಕ ನಿರೂಪಿಸಿದರು. ಸಂಘಟನಾ ಕಾರ್ಯದರ್ಶಿ ವಿಶ್ವನಾಥ ಬೇಂದ್ರೆ ವಂದಿಸಿದರು. ಕೋಶಾಧ್ಯಕ್ಷೆ ಪಾರ್ವತಿ ಬೇವಿನಮರದ ನಿರ್ವಹಿಸಿದರು.

ರತ್ನಕ್ಕಾ ಪಾಟೀಲ, ಶಿವಾನಂದ ಗಿಡ್ನಂದಿ, ಕಿಶೋರಬಾಬು ನಾಗರಕಟ್ಟಿ, ರತ್ನಾ ಪುರಂದರೆ, ಬಸವರಾಜ ಗಣಪ್ಪನವರ, ಶಂಕರಗೌಡ ಪಾಟೀಲ, ಅಕ್ಕಮಹಾದೇವಿ ಮಿಣಜಗಿ, ಶೈಲಜಾ ಬಣಗಾರ, ಪುಷ್ಪಾ ಶೆಟ್ಟರ್, ಸುಧಾ ಚಳ್ಳಮರದ, ಸಂಗಮ್ಮ ಮರಬದ, ನಾಗರಾಜ ಶಿರೂರ, ರಾಚಪ್ಪ ಹುಣಸೀಮರದ, ಅಶೋಕ ಶೆಟ್ಟರ್, ಶಿವಲೀಲಾ ಬೆಂಗಳೂರ, ಸಾವಿತ್ರಿ ಮೂರಶಿಳ್ಳಿನ, ವೈಷ್ಣವಿ ಮಿಣಜಗಿ, ಸುರೇಶ ಬಳಗಾರ, ಶಿವಮ್ಮ ಬಳಗಾರ, ಸಿದ್ಧಲಿಂಗೇಶ ಅಂಗಡಿ ಮುಂತಾದವರು ಹಾಜರಿದ್ದರು.

ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ವ್ಯಕ್ತಿಯ ಬದುಕಿನ ಹಿನ್ನೆಲೆ ಅವರ ಸಾಧನೆಗೆ ಪೂರಕವಾಗಿರುತ್ತದೆಯೇ ಹೊರತು ಎಂದೂ ಅಡ್ಡಿಯಾಗದು. ಬದುಕಿನ ವಾಸ್ತವತೆಯನ್ನು ಅರಿತು ಬದುಕಿದವರು ಇತಿಹಾಸವನ್ನು ಸೃಷ್ಟಿಸಿದ್ದಾರೆ. ಅಂತಹವರಲ್ಲಿ ಎಚ್.ಎನ್. ಹೂಗಾರ ಅವರೂ ಒಬ್ಬರು ಎಂದು ನುಡಿದರು.

# ಕ್ರೀಡಾಪಟುಗಳಿಗೆ ಸನ್ಮಾನ

▶▶ಮೊದಲನೇ ಪುಟದಿಂದ

ಇರ್ಫಾನ ಡಂಬಳ, ಫ್ಯಾಬ್ರಿಕೇಟರ್ಸ್ ಸಂಘದ ಅಧ್ಯಕ್ಷ ಇಬ್ರಾಹೀಂ ಹಳ್ಳಿಕೇರಿ, ಉಪಾಧ್ಯಕ್ಷ ಲಿಯಾಕತ್ ಮುಲ್ಲಾ, ಗೌರವಾಧ್ಯಕ್ಷ ಭೀಮಪ್ಪ ಪೂಜಾರ, ರಮೇಶ ಬಿಳೆಯಲಿ, ಕ್ರೀಡಾ ಪ್ರೇಮಿಗಳಾದ ಸೋಮು ಅಂಗಡಿ, ಕಾರ್ಮಿಕ ಸಂಘದ ಮುಖಂಡರು ಉಪಸ್ಥಿತರಿದ್ದರು.

ಮುಸ್ತಾಕ ಮುಲ್ಲಾ, ಶಂಕರ ಗುರು ಬಸಣ್ಣವರ, ಗೌಸವೋದಿನ ಬಳ್ಳಾರಿ, ಮೈನು ಗುಜಮಾಗಡಿ, ರಮೇಶ ವಾಲ್ಮೀಕಿ, ರಶೀದ ನರಗುಂದ, ದಾದಾಫೀರ ಹುಬ್ಬಳ್ಳಿ, ರಿಜ್ವಾನ ಕಿಲ್ಲೇದಾರ, ಹಾಫೀಜ್ ರೋಣ, ಮೇಘರಾಜ ತುಳಸಿಮನಿ ಹಾಗೂ ಇತರರು ಕ್ರೀಡಾಪಟುಗಳಿಗೆ ಸನ್ಮಾನಿಸಿ, ಗೌರವಿಸಿದರು. ಕಾರ್ಮಿಕ ಕಲ್ಯಾಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ನಾಶೀರ ಚಿಕೇನಕೊಪ್ಪ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

# ಶ್ರೀ ಕೈಲಾಸ ಆಶ್ರಮದ ವಾರ್ಷಿಕೋತ್ಸವ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಹುಲಕೋಟಿ ಗ್ರಾಮದಲ್ಲಿರುವ ಶ್ರೀ ಕೈಲಾಸ ಆಶ್ರಮದ 32ನೇ ವಾರ್ಷಿಕೋತ್ಸವ ಕಾರ್ಯಕ್ರಮವು ಮಹಾಸಂಸ್ಥಾನದ ಸಂಸ್ಥಾಪಕರಾದ ಪರಮಪೂಜ್ಯ ಶ್ರೀಮತ್ಸರಮಹಂಸ ಪರಿವ್ರಾಜಕಾಚಾರ್ಯ ಸಚ್ಚಿದಾ ನಂದ ಪ್ರಣವಸ್ವರೂಪ ಪರಮಾಚಾರ್ಯ ಜಗದ್ಗುರು, ಶ್ರೀ ಶಿವರತ್ನಪುರಿ ಭಾಗವತ್ಪಾದಾಚಾರ್ಯ ನಾಮಾಂಕಿತ ಶ್ರೀ ತಿರುಚ್ಚಿ ಮಹಾಸ್ವಾಮಿಗಳವರ ಪರಿಪೂರ್ಣ ಕೃಪಾಶೀರ್ವಾದಗಳೊಂದಿಗೆ, ಶ್ರೀ ಕೈಲಾಸ ಆಶ್ರಮ ಮಹಾಸಂಸ್ಥಾನದ ಪೀಠಾಧಿಪತಿಗಳಾದ ಪರಮ ಪೂಜ್ಯ



ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಸಚ್ಚಿದಾನಂದ ಪ್ರಣವಸ್ವರೂಪ ಆಚಾರ್ಯ ಮಹಾಮಂಡಲೇಶ್ವರ ಜಗದ್ಗುರು ಶ್ರೀ ಜಯೇಂದ್ರಪುರಿ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಜ.28ರಂದು ಬೆಳಿಗ್ಗೆ 11 ಗಂಟೆಗೆ ಏರ್ಪಡಿಸಲಾಗಿದೆ.

ಡಂಬಳದ ಎಡಿಯೂರು ತೋಂಟದಾರ್ಯ ಸಂಸ್ಥಾನ ಮಠದ ಪರಮಪೂಜ್ಯ ಜಗದ್ಗುರು ಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಹರಿಹರಪುರದ ಶ್ರೀ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನರಸಿಂಹ ಪೀಠದ ಪರಮಪೂಜ್ಯ ಶ್ರೀಮದ್ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಶ್ರೀ ಸ್ವಯಂಪ್ರಕಾಶ್ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮಿಗಳು, ಶ್ರೀ ಶಿವಾನಂದ ಮಠದ ಜಗದ್ಗುರು ಶ್ರೀ ಅಭಿನವ ಶಿವಾನಂದ ಮಹಾಸ್ವಾಮಿಗಳು, ಶಿರಹಟ್ಟಿಯ ಶ್ರೀ ಫಕೀರೇಶ್ವರ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಫಕೀರೇಶ್ವರ ಮಹಾಸ್ವಾಮಿಗಳು, ಗದಗ-ಬಿಜಾಪೂರದ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಶ್ರೀ ನಿರ್ಭಯಾನಂದ ಸರಸ್ವತಿ ಮಹಾಸ್ವಾಮಿಗಳು, ಬೆಳಗಾವಿಯ ಜಗದ್ಗುರು ಶ್ರೀ ದುರದುಂಡೇಶ್ವರ ಸಿದ್ಧ ಸಂಸ್ಥಾನ ಮಠ, ನಿಡಸೋಸಿಯ ಉತ್ತರಾಧಿಕಾರಿಗಳಾದ ಶ್ರೀ ನಿಜಲಿಂಗೇಶ್ವರ ಸ್ವಾಮೀಜಿಗಳು, ರಾಮೋಹಳ್ಳಿಯ ರಾಮಕೃಷ್ಣ ಯೋಗಾಶ್ರಮದ ಅಧ್ಯಕ್ಷರಾದ ಶ್ರೀಮದ್ ಸ್ವಾಮಿ ಯೋಗೇಶ್ವರಾನಂದಜಿ ಮಹಾರಾಜ್ ಇವರು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಸದ್ಭಕ್ತರಿಗೆ ದರ್ಶನಾಶೀರ್ವಾದ, ಸದುಪದೇಶ ನೀಡಲಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ಸಂಜೆ 6 ಗಂಟೆಗೆ ಜಗನ್ಮಾತೆ ಶ್ರೀ ರಾಜರಾಜೇಶ್ವರಿ ಮತ್ತು ಶ್ರೀಗಳವರ ಹೂವಿನ ಪಲ್ಲಕ್ಕಿಯಲ್ಲಿ ಉತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಸದ್ಭಕ್ತರೆಲ್ಲರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಗುರುಗಳ ದರ್ಶನಾಶೀರ್ವಾದ ಪಡೆಯಬೇಕೆಂದು ಹುಲಕೋಟಿಯ ಶ್ರೀ ಕೈಲಾಸ ಆಶ್ರಮದ ಧರ್ಮ ದರ್ಶಿಗಳಾದ ಎಚ್.ಕೆ. ಪಾಟೀಲ್, ಡಿ.ಆರ್. ಪಾಟೀಲ್, ಎಸ್.ಕೆ. ಪಾಟೀಲ್, ರವಿ ಎಂ.ಮೂಲಿಮನಿ, ಕೆ.ಆರ್. ಪ್ರಭು, ಎನ್.ಆರ್. ಸಾತ್ಕಾರ್, ಜೆ.ಕೆ. ಜಮಾದಾರ್, ಹಯಗ್ರೀವಾಚಾರ್ ಸಿ.ಬಿ. ಕರಿಕಟ್ಟಿ, ಎಂ.ಡಿ. ದುರ್ಗಣ್ಣವರ್, ಶಿವರತ್ನಕುಮಾರ ಟಿ.ಪಾಟೀಲ್, ಡಿ.ಜಿ. ಜೋಗಣ್ಣವರ್ ತಿಳಿಸಿದ್ದಾರೆ.

# ಸಂಭ್ರಮದ ಶ್ರೀ ಬೀರಲಿಂಗೇಶ್ವರ ಜಾತ್ರೆ

■ವಿಜಯಸಾಕ್ಷಿ ಸುದ್ದಿ, ಗದಗ

ಸಮಿಪದ ತಿಮ್ಮಾಪೂರ ಗ್ರಾಮದಲ್ಲಿ ಶುಕ್ರವಾರ ಶ್ರೀ ಬೀರಲಿಂಗೇಶ್ವರ ಜಾತ್ರಾ ಮಹೋತ್ಸವ ವಿಜ್ರಂಭಣೆಯಿಂದ ನಡೆಯಿತು. ಬೆಳಿಗ್ಗೆ 10 ಗಂಟೆಗೆ ಸಕಲ ಮಂಗಳಕರ ವಾದ್ಯಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವದ ಮೂಲಕ ಸಂಚರಿಸಿ ಗುಡಿಯನ್ನು ತಲುಪಿತು.

ಮಧ್ಯಾಹ್ನ ನೂರಾರು ಭಕ್ತರು ಪ್ರಸಾದ ಸ್ವೀಕರಿಸಿದರು. ರಾತ್ರಿ 8 ಗಂಟೆಗೆ ಶಾಲಾ ಮಕ್ಕಳಿಂದ ಆಯೋಜಿಸಿದ್ದ ಜಾನಪದ, ಸಾಂಸ್ಕೃತಿಕ



ಕಾರ್ಯಕ್ರಮ, ರಸಮಂಜರಿ ಕಾರ್ಯಕ್ರಮವನ್ನು ಯಲ್ಲಪ್ಪ ಡಂಬಳ ಹಾಗೂ ಸುವರ್ಣ ಡಂಬಳ ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಗದಗ ಜಿಲ್ಲಾ ರೈತ ಸಂಘದ ಅಧ್ಯಕ್ಷ ಯಲ್ಲಪ್ಪ ಎಚ್.ಬಾಬರಿ ಕಲಾವಿದರನ್ನು ಸನ್ಮಾನಿಸಿದರು.

ಬೀರಲಿಂಗೇಶ್ವರ ಜಾತ್ರಾ ಕಮಿಟಿ ಸದಸ್ಯರಾದ ರಮೇಶ ಬನಾಪೂರ, ಶಿವಾನಂದ ಡಂಬಳ, ಚಂದ್ರು ಆಲೂರ, ಮಾರುತಿ ಕಟಗಿ, ಮಂಜುನಾಥ ಕೂಪ್ಪಳ, ಶ್ರೀಕಾಂತ ಬಾಬರಿ, ಮಾರುತಿ ಹಚ್ಚಪ್ಪನವರ, ಬೀರಪ್ಪ, ಬಂಡಿಹಾಳ, ಮಲ್ಲಪ್ಪ ಡಂಬಳ, ಬೀರಪ್ಪ ಬನಾಪೂರ, ಹನುಮಪ್ಪ ಬಿಚಗಲ್ಲ, ಮಾರುತಿ ಗಾಜಿ, ಶರಣಪ್ಪ ಜೋಗಿನ, ಶ್ರೀನಿವಾಸ ಗಾಜಿ, ಹನುಮಪ್ಪ ಜೋಗಿನ, ಮಲ್ಲಪ್ಪ ಜೋಗಿನ, ಮಂಜು ವೀರಾಪುರ ಮುಂತಾದವರು ಪಾಲ್ಗೊಂಡಿದ್ದರು. ಕಾರ್ಯಕ್ರಮವನ್ನು ಸುರೇಶ ಬಿ.ಆಲೂರು ನಿರೂಪಿಸಿದರು.

# ಏಕತೆ ಕಾಣುವುದೇ ಗಣರಾಜ್ಯೋತ್ಸವದ ಉದ್ದೇಶ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ರಾಷ್ಟ್ರೀಯ ಹಬ್ಬಗಳಿಗೆ ಜಾತಿ, ಮತ, ಪಂಥಗಳ ಬೇಧವಿಲ್ಲ. ಸರ್ವ ಜನಾಂಗದ ಏಕತೆ ಕಾಣುವದೇ ಗಣರಾಜೋತ್ಸವ ಆಚರಣೆಯ ಮಹತ್ವವಾಗಿದೆ ಎಂದು ನರೇಗಲ್ಲ ಹಿರೇಮಠದ ಷ.ಬ್ರ ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಅವರು ಪಟ್ಟಣದ ಜಗದ್ಗುರು ಪಂಚಾಚಾರ್ಯ ಗ್ರಾಮಿಣಾಭಿವೃದ್ಧಿ ಶಿಕ್ಷಣ ಸಂಸ್ಥೆಯ ಶ್ರೀ ರೇಣುಕಾಚಾರ್ಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ನಡೆದ 75ನೇ ಗಣರಾಜೋತ್ಸವದ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಹಲವು ಭಾಷೆ, ವೇಷ ಭೂಷಣಗಳನ್ನೊಳಗೊಂಡ ಸಾಂಸ್ಕೃತಿಕ ಹಿನ್ನೆಲೆಯುಳ್ಳ ನಮ್ಮ ದೇಶ ಕಾನೂನು ನಿಯಮಗಳನ್ನು ಮೀರದಿರಲೆಂದು ಡಾ. ಬಿ.ಆರ್. ಅಂಬೇಡ್ಕರ್ ಸಮಾನತೆಗಾಗಿ ಸಂವಿಧಾನವನ್ನು ಸಮರ್ಪಕವಾಗಿ ನಿರ್ಮಿಸಿ ಸಂವಿಧಾನ ಶಿಲ್ಪಿಯಾಗಿ ಪ್ರಜೆಗಳ ಪ್ರಜಾಪ್ರಭುತ್ವವನ್ನು ಎತ್ತಿಹಿಡಿದಿದ್ದಾರೆ. ಉತ್ತಮ ಸಂಸ್ಕಾರವುಳ್ಳ ಈ ರಾಷ್ಟ್ರದ ವೈಭವವನ್ನು ಪೀಳಿಗೆಯಿಂದ ಪೀಳಿಗೆಗೆ ತಿಳಿಸುವದಕ್ಕಾಗಿ ಈ ರಾಷ್ಟ್ರೀಯ ಪ್ರಜಾರಾಜ್ಯೋತ್ಸವ ಹಬ್ಬವನ್ನು ಆಚರಿಸಲಾಗುತ್ತದೆ ಎಂದು ತಿಳಿಸಿದರು.

ಅತಿಥಿಗಳಾಗಿ ಪಾಲ್ಗೊಂಡ ನಿವೃತ್ತ ಶಿಕ್ಷಕ ಎಮ್.ಎ. ಹಿರೇವಡೆಯರ ಮಾತನಾಡಿ, ಮಕ್ಕಳು ಈ ದೇಶದ ಸಂಪತ್ತು. ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ತಿಳಿಸಿ ಶಿಸ್ತಿನಿಂದ ಮುನ್ನಡೆಯಲು ಪ್ರೇರೆಪಿಸಿದಲ್ಲಿ ದೇಶ ಪ್ರಗತಿ ಹೊಂದಲು ಸಹಕಾರಿಯಾಗಲಿದೆ ಎಂದರು.

ಸಂಸ್ಥೆಯ ಸದಸ್ಯ ಡಾ. ಆರ್.ಕೆ. ಗಚ್ಚಿನಮಠ ಮಕ್ಕಳಿಗೆ ಬಹುಮಾನ ವಿತರಿಸಿದರು. ಅತಿಥಿಗಳಾಗಿ ಕಾರ್ಯದರ್ಶಿ ಈಶ್ವರ ಬೆಟಗೇರಿ, ಮುಖ್ಯೋಪಾಧ್ಯಾಯೆ ಎನ್.ಎಸ್. ಹಿರೇಮಠ, ಎ.ಎಮ್. ಬೆಟಗೇರಿ ಹಾಗೂ ಸಹ ಶಿಕ್ಷಕರು ಉಪಸ್ಥಿತರಿದ್ದರು.

# ಸಂಗೊಳ್ಳಿ ರಾಯಣ್ಣ ಪುಣ್ಯಸ್ಮರಣೆ



■ವಿಜಯಸಾಕ್ಷಿ ಸುದ್ದಿ, ಗದಗ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ ಪುಣ್ಯಸ್ಮರಣೆ ಪ್ರಯುಕ್ತ ಕ್ರಾಂತಿ ಸೇನಾ ಗದಗ ಜಿಲ್ಲಾ ಸಂಘಟನೆ ವತಿಯಿಂದ ಬೃಹತ್ ಪಂಜಿನ ಮೆರವಣಿಗೆ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಕ್ರಾಂತಿ ಸೇನಾ ಗದಗ ಜಿಲ್ಲಾ ಗೌರವ ಕಾರ್ಯದರ್ಶಿ ಪ್ರವೀಣ ಹಬೀಬ ಮಾತನಾಡಿ, ಕನ್ನಡ ನೆಲ-ಜಲಕ್ಕಾಗಿ ಬ್ರಿಟಿಷರ ವಿರುದ್ಧ ಸತತ ಹೋರಾಟ ನಡೆಸಿದ ಕ್ರಾಂತಿಕಾರಿ ಸಂಗೊಳ್ಳಿ ರಾಯಣ್ಣನ ಚರಿತ್ರೆಯನ್ನು ತಿಳಿದುಕೊಂಡು ಯುವಕರು ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಅಧ್ಯಕ್ಷ ಬಾಬು ಬಾಕಳೆ ಮಾತನಾಡಿ, ನಮ್ಮ ದೇಶಕ್ಕಾಗಿ, ನಾಡು-ನುಡಿಗಾಗಿ ಶ್ರಮಿಸಿದ ಸಂಗೊಳ್ಳಿ ರಾಯಣ್ಣ, ಕಿತ್ತೂರ ಚನ್ನಮ್ಮ, ಕ್ರಾಂತಿಕಾರಿಗಳಾದ ಭಗತ್‌ಸಿಂಗ್, ರಾಜಗುರು ಸುಖದೇವ್, ಛತ್ರಪತಿ ಶಿವಾಜಿ ಮುಂತಾದವರಿಗೆ ಗೌರವ ಸಲ್ಲಿಸಬೇಕಾಗಿರುವುದು ನಮ್ಮ ಕರ್ತವ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಕ್ರಾಂತಿ ಸೇನಾ ಸಂಘಟನೆ ಸರ್ವ ಪದಾಧಿಕಾರಿಗಳು ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ ಅಭಿಮಾನಿಗಳು ಉಪಸ್ಥಿತರಿದ್ದರು.

# ಗಣರಾಜ್ಯೋತ್ಸವ, ಬಲಿದಾನ ದಿವಸ ಆಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿಯ ಸಮಿಪದ ತಿಮ್ಮಾಪೂರ ಗ್ರಾಮದಲ್ಲಿ ಗಣರಾಜ್ಯೋತ್ಸವ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಬಲಿದಾನ ದಿವಸವನ್ನು ವಿವಿಧ ಸಂಘ-ಸಂಸ್ಥೆಗಳ ವತಿಯಿಂದ ಆಚರಿಸಲಾಯಿತು. ಸಂಗೊಳ್ಳಿ ರಾಯಣ್ಣನ ಕಂಚಿನ ಪುತ್ಥಳಿ ಮುಂದೆ ಧ್ವಜಾರೋಹಣವನ್ನು ರೈತ ಸಂಘದ ಗದಗ ಜಿಲ್ಲಾಧ್ಯಕ್ಷ ಯಲ್ಲಪ್ಪ ಎಚ್.ಬಾಬರಿ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರಾದ ರಾಮಪ್ಪ ಹುಚ್ಚಪ್ಪನವರ, ಶರಣಪ್ಪ ಜೋಗಿನ, ಯಲ್ಲಪ್ಪ ಜೋಗಿನ, ಕುಬೇರಗೌಡ ಪಾಟೀಲ, ಮಲ್ಲಪ್ಪ ಮಾಳಗುಂಡರ, ರಾಮಪ್ಪ ಗುಡ್ಲಾನೂರ, ಕನಕಪ್ಪ ತಳವಾರ, ಯಲ್ಲಪ್ಪ ಯತ್ನಟ್ಟಿ, ಕರಿಯಪ್ಪ ಬಾಬರಿ, ರಾಮಣ್ಣ ಖಂಡ್ರಿ, ರಾಮಣ್ಣ ಕುರಡಗಿ, ರಾಜು ಚವಾಣ, ಈರಣ್ಣ ಕಮತರ, ಜೆ.ಜೆ. ಹೀರೆಹಾಳ, ಮಂಜು ಬಸರಿಕಟ್ಟಿ, ಕನಕದಾಸ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರು ಪಾಲ್ಗೊಂಡಿದ್ದರು.



# ರಾಯಣ್ಣನ ಬದುಕು ಯುವಕರಿಗೆ ಪ್ರೇರಣೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕನ್ನಡ ನಾಡಿನ ಹೆಮ್ಮೆಯಾಗಿದ್ದಾರೆ. ರಾಯಣ್ಣನ ದೇಶಪ್ರೇಮ, ಸ್ವಾಭಿಮಾನ, ಶೌರ್ಯ, ಆತ್ಮಗೌರವ ಯುವ ಜನತೆಗೆ ಸ್ಫೂರ್ತಿಯಾಗಿವೆ ಎಂದು ಪುರಸಭೆ ಮಾಜಿ ಅಧ್ಯಕ್ಷ ಹಾಗೂ ಕುರುಬ ಸಮಾಜದ ಮುಖಂಡ ವಿರುಪಾಕ್ಷಪ್ಪ ಪಡಗೇರಿ ಹೇಳಿದರು.

ಗಣರಾಜ್ಯೋತ್ಸವ ಮತ್ತು ರಾಯಣ್ಣನ ಬಲಿದಾನ ದಿನದ ನಿಮಿತ್ತ ಶುಕ್ರವಾರ ಸಂಜೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಭಿಮಾನಿ ಬಳಗದಿಂದ ಹಮ್ಮಿಕೊಂಡಿದ್ದ ಪಂಜಿನ ಮೆರವಣಿಗೆಯಲ್ಲಿ ಪಾಲ್ಗೊಂಡು ಮಾತನಾಡಿ, ಕಿತ್ತೂರ ರಾಣಿ ಚನ್ನಮ್ಮಳ ಬಲಗೈ ಬಂಟನಾಗಿ ಸ್ವಾತಂತ್ರ್ಯ ಹೋರಾಟದ ಕಹಳೆ ಊದುವ ಮೂಲಕ ಸ್ವಾತಂತ್ರದ ಕಿಚ್ಚು ಹಚ್ಚಿದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಈ ದೇಶದ ಸ್ವಾಭಿಮಾನದ ಸಂಕೇತವಾಗಿದ್ದಾರೆ. ರಾಯಣ್ಣನ ಬದುಕು ಯುವಕರಿಗೆ ಪ್ರೇರಣೆಯಾಗಿದ್ದು, ಯುವಕರು ರಾಯಣ್ಣನ ದೇಶಾಭಿಮಾನ, ಸ್ವಾಭಿಮಾನ, ತ್ಯಾಗ, ಶೌರ್ಯ ಮತ್ತು ಮಾನವೀಯ ಚಿಂತನೆಗಳನ್ನು ರೂಢಿಸಿಕೊಳ್ಳಬೇಕು ಎಂದರು.

ಈ ವೇಳೆ ರಾಯಣ್ಣ ಬಳಗದ ಜಿಲ್ಲಾಧ್ಯಕ್ಷ ಬಸವರಾಜ ಹಿರೇಮನಿ, ತಿಪ್ಪಣ್ಣ ಸಂಶಿ, ನೀಲಪ್ಪ ಪಡಗೇರಿ, ಸುರೇಶ ಹಟ್ಟಿ, ಪದ್ಮರಾಜ ಪಾಟೀಲ, ಸುರೇಶ ನಂದೆಣ್ಣವರ, ಮಂಜನಾಥ ಮಾಗಡಿ, ಭರಮಣ್ಣ ಶರಸೂರಿ, ಮಹಾಂತೇಶ ಬಸಾಪೂರ ಮುಂತಾದವರಿದ್ದರು.

ಪಂಜಿನ ಮೆರವಣಿಗೆಯು ಚನ್ನಮ್ಮನ ವರ್ತುಲದಿಂದ ಆರಂಭವಾಗಿ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಶಿಗ್ಗಿ ನಾಕಾದಲ್ಲಿ ಸಂಪನ್ನಗೊಂಡಿತು.

## ಉಜ್ವಲ ಗ್ಯಾಸ್ ಸಿಲಿಂಡರ್ ವಿತರಣೆ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರದ ವಾರ್ಡ್ ನಂ. 19, 20, 21, 25ರಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಕನಸಿನ ಯೋಜನೆಯಾದ ಉಜ್ವಲ ಗ್ಯಾಸ್ ಸಿಲಿಂಡರ್ ವಿತರಣೆ ಜರುಗಿತು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ನರಗುಂದ ಶಾಸಕ ಸಿ.ಸಿ. ಪಾಟೀಲ ಮಾತನಾಡಿ, ಬಿಜೆಪಿಯ ಮುಖಂಡರಾದ ಚಾಂದಸಾಬ್ ಕೊಟ್ಟೂರ ಹಾಗು ಕಮಲಾಕ್ಷೀ ಗೊಂದಿ ಅವರ ಪರಿಶ್ರಮದಿಂದ ಅರ್ಹ ಫಲಾನುಭವಿಗಳಿಗೆ ಸರ್ಕಾರದ ಉಜ್ವಲ ಯೋಜನೆಯ ಗ್ಯಾಸ್ ಸಿಲಿಂಡರ್‌ನ್ನು ಕೊಡಿಸುವ ಕಾರ್ಯ ಮೆಚ್ಚುವಂತದ್ದು ಎಂದರು.


ಕಾರ್ಯಕ್ರಮದಲ್ಲಿ ವಿ.ಪ ಸದಸ್ಯ ಎಸ್.ವ್ಹಿ. ಸಂಕನೂರ, ಬಿಜೆಪಿ ಜಿಲ್ಲಾಧ್ಯಕ್ಷ ರಾಜು ಕುರುಡಗಿ ಮಾತನಾಡಿದರು. ಫಲಾನುಭವಿಗಳಾದ ರತ್ನಾ ಜಾಡಬಂಡಿ, ಗಂಗವ್ವ ತಳವಾರ, ಪ್ರಿಯಾ ಹಾದಿಮನಿ, ರೇಖಾ ರಾಯಚೂರ, ದಾವಲಬಿ ಸೊಂಪೂರ, ಮಂಜುಳಾ ಖೋಡೆ, ಖಾಜಾಬಿ ಕೊಪ್ಪಳ, ಯಲ್ಲಮ್ಮ ದುಂಡಸಿ, ದೇಹಿಂಡೆ, ಇಸ್ಲಾಂಬಿ ದಂಡಿನ ಹಸಿನಾಬಾನು ಮುಲ್ಲಾ, ಆಯುಷಾ ಮುಂತಾದವರಿಗೆ ಗ್ಯಾಸ್ ಸಿಲಿಂಡರ್ ವಿತರಿಸಲಾಯಿತು.

ಗ್ಯಾಸ್ ವಿತರಣೆ ಮಾಡಿದ ಸಜ್ಜನ್ & ಸನ್ಸ್ ಮಾಲಿಕರಿಗೆ ಧನ್ಯವಾದ ಅರ್ಪಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಪತಿ ಉಡುಪಿ, ರವಿ ದಂಡಿನ, ನಗರಸಭಾಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ, ರಮೇಶ ಸಜ್ಜಗಾರ, ಪ್ರಕಾಶ ಅಂಗಡಿ, ಮಾಂತೇಶ ನಲವಡಿ, ಮುತ್ತು ಮುಶಿಗೇರಿ, ಚಂದ್ರು ತಡಸದ, ವಿದ್ಯಾವತಿ ಗಡಗಿ, ವಿಜಯಲಕ್ಷ್ಮೀ ದಿಂಡೂರ, ಲಕ್ಷ್ಮೀ ಕಾಕಿ ಉಪಸ್ಥಿತರಿದ್ದರು.

## ಶರಣ ಸಂಗಮ ಕಾರ್ಯಕ್ರಮ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಜ.28ರಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಬಸವದಳದ 1578ನೇ ಶರಣ ಸಂಗಮದಲ್ಲಿ ಶರಣ ಅಂಬಿಗ ಚೌಡಯ್ಯನವರ ಜಯಂತಿ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.



ಅಧ್ಯಕ್ಷತೆಯನ್ನು ಬಸವದಳದ ಹಿರಿಯ ಪದಾಧಿಕಾರಿ ಶರಣ ಎಸ್. ಎನ್. ಹಕಾರಿ, ವಹಿಸುವರು. ಅಂಬಿಗ ಚೌಡಯ್ಯ ಪ್ರತಿಷ್ಠಾನದ ಅಧ್ಯಕ್ಷ ಶರಣ ಸಂಗನಬಸವನಶ್ರೀಪಾದ ಹಾದಿಮನಿ ಉಪನ್ಯಾಸ ಮಾಡುವರು.

ಕಾರಣ ಬಸವದಳದ ಸದಸ್ಯರು, ಶರಣ ಸಾಹಿತ್ಯಾಭಿಮಾನಿಗಳು ಹಾಗೂ ಆಸಕ್ತರು ಭಾಗವಹಿಸಬೇಕೆಂದು ಸಂಘಟಿಕರ ಪರವಾಗಿ ಪ್ರಕಾಶ ಅಸುಂಡಿಯವರು ವಿನಂತಿಸಿದ್ದಾರೆ.

### ಗ್ರಾಮೀಣ ಕಲಾವಿದನ ಕೈಯಲ್ಲಿ ಅರಳಿದ ವಿಶಿಷ್ಟ ಧ್ಯಾನಾಸಕ್ತ ಹನುಮನ ಮೂರ್ತಿ

## ಕಲಾ ನಿಪುಣ ಮಹೇಶ ದೊಡ್ಡಮನಿ

■ವಿಜಯಸಾಕ್ಷಿ ಸುದ್ದಿ, ಲಕ್ಮೇಶ್ವರ

ಕಲೆ ಯಾರ ಸ್ವತ್ತೂ ಅಲ್ಲ, ಅದು ಕಲಾವಿದನ ಸ್ವತ್ತು. ಕಲೆಗೆ ಯಾವುದೇ ಜಾತಿ, ಧರ್ಮ, ಮೇಲು-ಕೀಳಿನ ಲೇಪನವಿಲ್ಲ ಎಂಬುದಕ್ಕೆ ಲಕ್ಷ್ಮೇಶ್ವರ ತಾಲೂಕಿನ ಬಟ್ಟೂರ ಗ್ರಾಮದ ಕಲಾವಿದ ಮಹೇಶ ದೊಡ್ಡಮನಿ ಸಾಕ್ಷಿಯಾಗಿದ್ದಾರೆ. ಯಾವುದೇ ಪ್ರಚಾರ ಬಯಸದೇ ಕಳೆದ ಹತ್ತಾರು ವರ್ಷಗಳಿಂದ ಕಲಾ ಸೇವೆಯಲ್ಲಿ ತೊಡಗಿರುವ ಗ್ರಾಮೀಣ ಪದವೀಧರ, ಕಲಾವಿದ ಮಹೇಶ ಎಲೆ ಮರೆಯಕಾಯಿಯಂತೆಯೇ ಇದ್ದು, ತಮ್ಮ ಕಾಯಕದಲ್ಲಿ ನಿರತರಾಗಿದ್ದಾರೆ.

ದಾವಣಗೇರಿ ಸಮೀಪದ ತಣಿಗೇರಿ ಗ್ರಾಮದಲ್ಲಿ ಜ.22ರಂದು ಉದ್ಘಾಟನೆಗೊಂಡ ಶ್ರೀರಾಮಾಂಜನೇಯ ದೇವಸ್ಥಾನದ ಮೇಲೆ ಅತ್ಯಂತ ವಿಶೇಷ, ಅಪರೂಪ ಮತ್ತು ಧ್ಯಾನಾಸಕ್ತ 13 ಅಡಿ ಎತ್ತರದ ಆಂಜನೇಯ ಮೂರ್ತಿ ಬಟ್ಟೂರಿನ ಕಲಾವಿದ ಮಹೇಶರಿಂದ ನಿರ್ಮಾಣಗೊಂಡಿರುವುದು ವಿಶೇಷ. ಶಿಲ್ಪಕಲಾ ವಿಭಾಗದ ಇಂಜಿನಿಯರ್ ತರುಣ ಪೂಜಾರ ಮತ್ತು ಚಿತ್ರಕಲಾ ಶಿಕ್ಷಕರಾದ ಸಚಿನ್ ಎಸ್.ಆರ್ ಅವರ ಮಾರ್ಗದರ್ಶನದಲ್ಲಿ ಎರಡೂವರೆ ತಿಂಗಳಲ್ಲಿ ಈ ಬೃಹತ್ ಆಂಜನೇಯ ಮೂರ್ತಿ ಸಿದ್ಧಗೊಂಡಿದೆ. 7 ಟನ್ ತೂಕದ ಈ ಮೂರ್ತಿ ನಿರ್ಮಾಣಕ್ಕೆ ಅಂದಾಜು 8 ಲಕ್ಷ ರೂ ವೆಚ್ಚ



ತಗುಲಿದೆ. 70 ಚೀಲ ಸಿಮೆಂಟ್, ಮರಳು ಸೇರಿ ಅವಶ್ಯಕ ವಸ್ತುಗಳನ್ನು ಬಳಸಿ ನಿರ್ಮಿಸಿರುವ ಮೂರ್ತಿ ಮಳೆ-ಬಿಸಿಲಿಗೆ ಜಗ್ಗದೇ ಅನೇಕ ವರ್ಷಗಳ ಕಾಲ ಕಂಗೊಳಿಸಲಿದೆ.

ಅನೇಕರಿಗೆ ಕಲೆ ವಂಶಪಾರಂಪರಿಕವಾಗಿ ಬಂದಿರುತ್ತದೆ. ಆದರೆ ಬಟ್ಟೂರಿನ ಮಹೇಶ ಹಿಂದುಳಿದ ವರ್ಗದ ಬಡ ಕೂಲಿಕಾರರ ಮಗ. ಈತ ತನ್ನ ಆಸಕ್ತಿಯಿಂದ ಚಿತ್ರಕಲಾ ಪದವಿ ಪಡೆದು ಎಲೆ ಮರೆಯ ಕಾಯಿಯಂತೆ ಕಲಾಸೇವೆ ಮಾಡುತ್ತಿದ್ದಾನೆ. ಸಿಕ್ಕ ಅವಕಾಶಗಳಲ್ಲಿ ತನ್ನಲ್ಲಿನ ಕಲಾ ನೈಪುಣ್ಯತೆಯೊಂದಿಗೆ ತನ್ನದೇ ಆದ ಛಾಪು ಮೂಡಿಸುತ್ತಿದ್ದಾನೆ. ಗದುಗಿನ ವಿಜಯ ಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲಾ ಪದವಿ ಪಡೆದ ಮಹೇಶ ಕಳೆದ 8-10 ವರ್ಷದಿಂದ ಶಿಗ್ಗಾಂವಿಯ ಗೊಡಗೂಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

> ಚಿತ್ರಕಲೆ ನನ್ನ ಆಸಕ್ತಿಯ ವಿಷಯ. ಆ ಕಾರಣದಿಂದಲೇ ಚಿತ್ರಕಲಾ ಪದವಿ ಪಡೆದು ಅನೇಕ ಗುರುಗಳ ಆಶೀರ್ವಾದ, ಸ್ನೇಹಿತರ, ಹಿತೈಷಿಗಳ ಸಹಾಯ-ಸಹಕಾರದಿಂದ ಚಿತ್ರಕಲೆಯಲ್ಲಿ ನನ್ನಿಂದಾದ ಅಳಿಲು ಸೇವೆ ಸಲ್ಲಿಸುತ್ತಿದ್ದೇನೆ. ತರುಣ ಪೂಜಾರ ಮತ್ತು ಸಚಿನ್ ಅವರು ನನಗೆ ದೊಡ್ಡ ಅವಕಾಶ ನೀಡಿ, ಸಲಹೆ-ಮಾರ್ಗದರ್ಶನ-ಸ್ಫೂರ್ತಿ ತುಂಬಿದ್ದರಿಂದ ಸುಂದರವಾದ ಮೂರ್ತಿ ನಿರ್ಮಾಣಗೊಂಡಿದೆ. ರಾಮಮಂದಿರ ಲೋಕಾರ್ಪಣೆ ದಿನ ತಣಗೇರಿ ರಾಮನ ದೇವಸ್ಥಾನದ ಮೇಲೆ ಪ್ರತಿಷ್ಠಾಪನೆಗೊಂಡಿರುವುದು ಅವಿಸ್ಮರಣೀಯ ಮತ್ತು ಸಂತಸ ತಂದಿದೆ.
>
> 
>
> **-ಮಹೇಶ ದೊಡ್ಡಮನಿ.**
> ಆಂಜನೇಯ ಮೂರ್ತಿ ಕಲಾವಿದ.

> ಎರಡೂವರೆ ತಿಂಗಳ ಕಾಲ ಹಗಲೂ-ರಾತ್ರಿ ಅತ್ಯಂತ ಶ್ರದ್ಧೆ, ಭಕ್ತಿ, ಪ್ರಾಮಾಣಿಕತೆಯಿಂದ ಅತ್ಯಂತ ಅಪರೂಪ ಮತ್ತು ವಿಶೇಷ ಕಲ್ಪನೆಯ ಧ್ಯಾನಾಸಕ್ತ 13 ಅಡಿ ಎತ್ತರದ ಆಂಜನೇಯ ಮೂರ್ತಿ ಮಹೇಶನಿಂದ ನಿರ್ಮಾಣಗೊಂಡಿದೆ. ಎಲೆಮರೆಯ ಕಾಯಿಯಂತಿರುವ ಬಡ ಕಲಾವಿದನಿಗೆ ಸಮಾಜ, ಸರ್ಕಾರ ಪ್ರೋತ್ಸಾಹ ಪ್ರೇರಣೆ ನೀಡಬೇಕು. ಮಹೇಶನಂತಹ ಗ್ರಾಮೀಣ ಪ್ರತಿಭೆಗಳು ಬೆಳಗಬೇಕು. ಮನಃಪೂರ್ವಕವಾಗಿ ಈ ಮೂರ್ತಿಯನ್ನು ಯಾವುದೇ ಸಂಭಾವನೆ ಪಡೆಯದೇ ನಿರ್ಮಿಸಿದ್ದಾನೆ. ಆತನ ಕಲಾ ಸೇವೆಗೆ ಗೌರವ ಸಲ್ಲಿಸುತ್ತೇವೆ.
>
> **- ತರುಣ ಪೂಜಾರ.**
> ಆಂಜನೇಯ ಮೂರ್ತಿ ನಿರ್ಮಾಣದ ಇಂಜಿನಿಯರ್.

## ಪಂಚಾಕ್ಷರ ಗವಾಯಿಗಳ ಪ್ರಶಸ್ತಿ ಘೋಷಣೆ ಸಂತಸ ತಂದಿದೆ

■ವಿಜಯಸಾಕ್ಷಿ ಸುದ್ದಿ, ಗದಗ

ಪಂ. ಪಂಚಾಕ್ಷರ ಗವಾಯಿಗಳ ಹೆಸರಿನಲ್ಲಿ ರಾಜ್ಯ ಸರಕಾರವು ರಾಷ್ಟ್ರೀಯ ಪ್ರಶಸ್ತಿಯನ್ನು ಪ್ರದಾನ ಮಾಡುತ್ತಿರುವುದು ಗವಾಯಿಗಳ ಅಸಂಖ್ಯಾತ ಶಿಷ್ಯರಿಗೆ ಹೆಮ್ಮೆ, ಸಂತಸ ತಂದಿದೆ ಎಂದು ಸಂಗೀತ ವಿದ್ವಾನ್ ಸದಾಶಿವ ಪಾಟೀಲ ಹೇಳಿದರು.

ಶನಿವಾರ ಇಲ್ಲಿನ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ವೀರೇಶ್ವರ ಪುಣ್ಯಾಶ್ರಮದ ಸಂಸ್ಥಾಪಕರಾದ ಪಂ. ಪಂಚಾಕ್ಷರ ಗವಾಯಿಗಳು ಲಿಂಗೈಕ್ಯರಾಗಿ ಏಳು ದಶಕಗಳೇ ಕಳೆದಿವೆ. ಹಿಂದಿನ ಸರಕಾರ ಅವರ ಸ್ಮರಣೆಯಲ್ಲಿ ಪ್ರಶಸ್ತಿ ನೀಡುವ ನಿರ್ಧಾರ ಕೈಗೊಂಡಿತ್ತು. ಈಗಿನ ಕಾಂಗ್ರೆಸ್ ಸರಕಾರವೂ ಪಂ. ಪಂಚಾಕ್ಷರ ಗವಾಯಿಗಳ ಹೆಸರಿನ ಪ್ರಶಸ್ತಿಯನ್ನು ಇಬ್ಬರಿಗೆ ಪ್ರದಾನ ಮಾಡುವ ನಿರ್ಧಾರ ಕೈಗೊಂಡಿರುವುದು ಸ್ವಾಗತಾರ್ಹವಾಗಿದೆ. 10 ಲಕ್ಷ ರೂ. ಪ್ರಶಸ್ತಿ ಮೊತ್ತವನ್ನು ಕೊಡಲು ತೀರ್ಮಾನಿಸಿರುವುದು ಸಂತಸ ತಂದಿದೆ. ಇದೇ ಜ.31ರಂದು ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ವೀರೇಶ್ವರ ಪುಣ್ಯಾಶ್ರಮದ ವ್ಯವಸ್ಥಾಪಕ ಹೇಮರಾಜ ಶಾಸ್ತ್ರೀಗಳು, ನಿಜಗುಣಿ ಗವಾಯಿಗಳು ಮುಂತಾದವರಿದ್ದರು.

## ಬೇಡಿಕೆ ಈಡೇರಿಕೆಗೆ ಕಾರ್ಮಿಕ ಅಧಿಕಾರಿಗಳಿಗೆ ಮನವಿ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದಲ್ಲಿ ಕಾರ್ಯ ನಿರ್ವಹಿಸುವ ಲಕ್ಷಾಂತರ ನಿರ್ಮಾಣ ವಲಯ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ರಾಜ್ಯಾದ್ಯಂತ ಸಹಿ ಸಂಗ್ರಹ ಆಂದೋಲನ ನಡೆಸಿ, ಕಾರ್ಮಿಕ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಯಿತು.



ಈ ಸಂದರ್ಭದಲ್ಲಿ ಮಾತನಾಡಿದ ಕಾರ್ಮಿಕ ಮುಖಂಡ ಮಹೇಶ ಹಿರೇಮಠ, ಎಲ್ಲಾ ರಾಜ್ಯಗಳಲ್ಲಿ ಕಟ್ಟಡ ಕಾರ್ಮಿಕರ ಪಿಂಚಣಿ ಜಾರಿಗೊಳಿಸಬೇಕು, ಅಗತ್ಯವಿರುವ ರಾಜ್ಯಗಳಿಗೆ ಕೇಂದ್ರ ಸರ್ಕಾರ ಆರ್ಥಿಕ ನೆರವು ನೀಡಬೇಕು, ಕಟ್ಟಡ ನಿರ್ಮಾಣ ಸಾಮಗ್ರಿಗಳ ಬೆಲೆಗಳ ಏರಿಕೆಯನ್ನು ನಿಯಂತ್ರಿಸಬೇಕು, ಕಾರ್ಮಿಕರ ಕನಿಷ್ಠ ವೇತನವನ್ನು ಹೆಚ್ಚಿಸಬೇಕು ಮುಂತಾದ ಬೇಡಿಕೆಗಳ ಮನವಿ ಪತ್ರವನ್ನು ಕಾರ್ಮಿಕ ಅಧಿಕಾರಿಗಳಿಗೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಹೇಶ ಹಿರೇಮಠ, ಗಣೇಶ ರಾಠೋಡ, ಮುತ್ತಪ್ಪ ಚಲವಾದಿ, ಮಾರುತಿ ಚಿಟಗಿ, ಮೆಹಬೂಬ ಹವಾಲ್ದಾರ, ಅಂದಪ್ಪ ಕುರಿ, ಶಾರದಾ ನಂಜಪ್ಪನವರ, ಹನಮಂತ ಮಲಾಡದ, ಗಾಳೆಪ್ಪ ಹೊಸಮನಿ, ವಿನಾಯಕ ಪವಾರ, ಈರವ್ವ ಬಂಡಿವಡ್ಡರ, ತುಕರಾಮ ಚವ್ಹಾಣ, ರೇಣವ್ವ ರಾಠೋಡ, ಮಲ್ಲಪ್ಪ ಅಳವಂಡಿ, ಕಲ್ಲಪ್ಪ ಓಲೇಕಾರ, ಮಹಮ್ಮದರಫೀಕ ನರಗುಂದ, ನಾಗಲಿಂಗ ಬಡಿಗೇರ, ನಾಗೇಶ ಬಡಿಗೇರ, ಮುರ್ತುಜಾ ಹಳ್ಳಿಕೇರಿ, ಮರ್ದಾನಸಾಬ ಹಳ್ಳಿಕೇರಿ, ಶ್ರೀನಿವಾಸ ಎಮ್ಮಿ, ಹನಮಂತಪ್ಪ ಎಮ್ಮಿ, ಭಾಷಾಸಾಬ ಜವಳಗೇರಿ, ಪಕ್ರು ಮಕಾಂದಾರ, ಬಸವರಾಜ ಬಡಿಗೇರ, ರಿಯಾಜ ನದ್ದಿಮುಲ್ಲಾ, ಮೈಬು ಜಲಣ್ಣವರ, ಮಧರಸಾಬ ಮಕಾಂದಾರ, ಬಕ್ಷಿ ಢಾಲಾಯತ ಮುಂತಾದವರು ಉಪಸ್ಥಿತರಿದ್ದರು.

## ಮೈನವಿರೇಳಿಸಿದ ವಿಶೇಷಚೇತನ ಮಕ್ಕಳ ಮಲ್ಲಕಂಬ ಪ್ರದರ್ಶನ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪಟ್ಟಣದ ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಕಿವಿ ಕೇಳಿಸದ ವಿಶೇಷಚೇತನ ಮಕ್ಕಳ ಶಾಲೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಅದ್ಭುತವಾದ ಮಲ್ಲಕಂಬದ ಕ್ರೀಡೆ ಶುಕ್ರವಾರ ಪ್ರದರ್ಶನಗೊಂಡಿತು.

75ನೇ ಗಣರಾಜ್ಯೋತ್ಸವದ ಅಂಗವಾಗಿ ಅಂಗ ಸಂಸ್ಥೆಯ ವತಿಯಿಂದ ಪದವಿ ಮಹಾವಿದ್ಯಾಲಯದ ಆವರಣಲ್ಲಿ ಏರ್ಪಡಿಸಲಾದ ಮಲ್ಲಕಂಬ ಪ್ರದರ್ಶನದಲ್ಲಿ 40ಕ್ಕೂ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ಈ ಕ್ರೀಡೆಯಲ್ಲಿ ಪೋಲ್ ಮಲ್ಲಕಂಬ ಪ್ರದರ್ಶನ ಹಾಗೂ ರೋಪ್ ಮಲ್ಲಕಂಬದ ಆಟ ಪ್ರದರ್ಶನಗೊಂಡಿತು. ಈ ಆಟಗಳಲ್ಲಿ ದಸರಂಗ, ಮಂಕಿಪಕಡ್, ಪದ್ಮಾಸನ, ಅಬ್ಡಮಲ್ ಬ್ಯಾಲೆನ್ಸ್, ಮಯೂರಾಸನ, ಗುರು ಪಕಡ್, ಹಾಲಾಸನ, ಹ್ಯಾಂಡ್ ಬ್ಯಾಲೆನ್ಸ್, ಭಜರಂಗಾಸನ, ಕೂರ್ಮಾಸನ, ವೀರಭದ್ರಾಸನ, ಅಲ್ಲದೇ ರೋಪ್ ಮಲ್ಲಕಂಬ ಕ್ರೀಡೆಯಲ್ಲಿ ಕ್ರಿಸ್ತಕ್ರಾಸ್, ಪದ್ಮಾಸನ, ಪಶ್ಚಿಮೋತ್ತಾನಾಸನ, ಪಾದಹಸ್ತಾಸನ, ವಿವಿಧ ಬಗೆಯ ಜಾಪ್, ನಟರಾಜಾಸನ, ಭಜರಂಗಾಸನ, ಕೂರ್ಮಾಸನ ಒಳಗೊಂಡು ಅನೇಕ ಆಸನಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು.



ಪಟ್ಟಣದ ಮಲ್ಲಕಂಬ ಕ್ರೀಡಾಪಟು ಕಳಕಪ್ಪ ಚವಡಿ ಹಾಗೂ ಎಂ.ವ್ಹಿ. ಹರ್ಲಾಪೂರ, ಮಹಮ್ಮದ್‌ರಫೀಕ್ ರೇವಡಿಗಾರ ದೈಹಿಕ ಶಿಕ್ಷಣ ಶಿಕ್ಷಕರ ಮಾರ್ಗದರ್ಶನದಲ್ಲಿ ಜರುಗಿದ ಈ ಕಿವುಡ ಮಕ್ಕಳ ಮಲ್ಲಕಂಬ ಪ್ರದರ್ಶನವು ನೋಡುಗರನ್ನು ಮಂತ್ರಮುಗ್ಧರನ್ನಾಗಿಸಿತು.

ಸಂಸ್ಥೆಯ ಅಧ್ಯಕ್ಷರು, ಹಾಲಕೆರೆ ಸಂಸ್ಥಾನ ಮಠದ ಪೀಠಾಧಿಪತಿ ಮುಪ್ಪಿನ ಬಸವಲಿಂಗ ಮಹಾ ಸ್ವಾಮೀಜಿಯವರು, ಆಡಳಿತಾಧಿಕಾರಿ ಎನ್.ಆರ್. ಗೌಡರ, ಕಿವುಡ ಮಕ್ಕಳ ಶಾಲೆಯ ಚೇರಮನ್ ಶರಣಪ್ಪ ರೇವಡಿ, ಸಂಸ್ಥೆಯ ಸದಸ್ಯರು, ವಿವಿಧ ಅಂಗ ಸಂಸ್ಥೆಗಳ ಮುಖ್ಯಸ್ಥರು ಭಾಗವಹಿಸಿದ್ದರು.

## ಶ್ರೀಮಠ ಆರೋಗ್ಯ ದಾಸೋಹ ಮಠವಾಗಿದೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಶ್ರೀಮಠಕ್ಕೆ ಬರುವ ಭಕ್ತರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಶಾಖಾ ಶಿವಯೋಗ ಮಂದಿರ ನಿಡಗುಂದಿಕೊಪ್ಪ ಶ್ರೀಗಳವರ ಮಠವು ಆಯುರ್ವೇದ ಔಷಧಿ ನೀಡುವ ಮೂಲಕ ಅನೇಕ ಕ್ಲಿಷ್ಟಕರ ರೋಗಗಳನ್ನು ಗುಣ ಪಡಿಸಿದ ಕೀರ್ತಿ ಶ್ರೀಮಠಕ್ಕೆ ಸಲ್ಲುತ್ತದೆ ಎಂದು ಹಾಲಕೆರೆ ಸಂಸ್ಥಾನ ಮಠದ ಮುಪ್ಪಿನ ಬಸವಲಿಂಗ ಮಹಾಸ್ವಾಮೀಜಿಯವರು ಹೇಳಿದರು.



ಅವರು ಸಮೀಪದ ನಿಡಗುಂದಿಕೊಪ್ಪ ಶಾಖಾ ಶಿವಯೋಗ ಮಂದಿರದಲ್ಲಿ ಹಮ್ಮಿಕೊಂಡಿದ್ದ ಲಿಂ. ಚನ್ನಬಸವ ಸ್ವಾಮೀಜಿಯವರ 4ನೇ ಹಾಗೂ ಲಿಂ. ಶಿವಬಸವ ಸ್ವಾಮೀಜಿಯವರ 8ನೇ ವರ್ಷದ ಪುಣ್ಯಸ್ಮರಣೋತ್ಸ ಸಮಾರಂಭದ ಪಾವನ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ವೈದ್ಯಕೀಯ ಜಗತ್ತಿಗೆ ಯಕ್ಷ ಪ್ರಶ್ನೆಯಾಗಿದ್ದ ಅನೇಕ ರೋಗಗಳಿಗೆ ಆಯುರ್ವೇದ ಪದ್ಧತಿಯಿಂದ ಪರಿಹರಿಸುವಲ್ಲಿ ಭವರೋಗ ವೈದ್ಯರು, ಮಹಾತಪಸ್ವಿಯಾಗಿದ್ದ ಲಿಂ. ಚನ್ನಬಸವ ಶ್ರೀಗಳು ಯಶಸ್ವಿಯಾಗಿದ್ದರು.

ವೈದ್ಯೋಪಚಾರವನ್ನೂ ಮೀರಿದ ರೋಗಗಳಿಗೆ ತಾವು ಪತ್ರಿವನದಲ್ಲಿ ಬೆಳೆದ ಗಿಡ ಮೂಲಿಕೆಗಳಿಂದ ಔಷಧೋಪಚಾರ ಮಾಡಿ ಗುಣಪಡಿಸುವ ಮೂಲಕ ಮಠವನ್ನು ಆರೋಗ್ಯದಾಸೋಹ ಮಠವನ್ನಾಗಿಸಿದರು ಎಂದು ನುಡಿದರು.

ನೂತನ ವರ್ಷದ ದಿನದರ್ಶಿಕೆ ಬಿಡುಗಡೆಗೊಳಿಸಿ ಹಾವೇರಿ ಹುಕ್ಕೇರಿಮಠ ಹಾಗೂ ಶಿವಯೋಗಮಂದಿರ ಶ್ರೀಮದ್ವೀರಶೈವ ಉಪಾಧ್ಯಕ್ಷರಾದ ಸದಾಶಿವ ಸ್ವಾಮೀಜಿಯವರು ಆಶೀರ್ವಚನ ನೀಡಿದರು. ಶಾಖಾ ಶಿವಯೋಗಮಂದಿರ ನಿಡಗುಂದಿಕೊಪ್ಪದ ಅಭಿನವ ಚನ್ನಬಸವ ಸ್ವಾಮೀಜಿ ನೇತೃತ್ವ ವಹಿಸಿದ್ದರು. ನರೇಗಲ್ಲ ಹಿರೇಮಠದ ಷ.ಬ್ರ. ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ನಿಡಗುಂದಿ ಧರ್ಮರ ಮಠದ ಷಣ್ಮುಖಪ್ಪಜ್ಜನವರು, ಅಸಂಗಿಯ ವೀರಭದ್ರೇಶ್ವರ ದೇವರು ಸಮ್ಮುಖ ವಹಿಸಿದ್ದರು.

ಅಬ್ಬಿಗೇರಿಯ ಸಿ.ಆರ್.ಪಿ ಎಸ್.ಆರ್. ಮೂಲಿಮನಿ ಉಪನ್ಯಾಸ ನೀಡಿದರು. ದಿನದರ್ಶಿಕೆ ದಾನಿ ನಿಡಗುಂದಿಯ ನಿವೃತ್ತ ಪೊಲೀಸ್ ಇಲಾಖೆಯ ವೀರಣ್ಣ ಬಸಪ್ಪ ಸೊಬಗಿನ, ನಿವೃತ್ತ ಉಪನ್ಯಾಸಕ ಶೇಖರಪ್ಪ ಕಲಕಬಂಡಿ ಉಪಸ್ಥಿತರಿದ್ದರು.

ಹಾಲಕೆರೆಯ ದ್ಯಾಮಣ್ಣ ಮಾಸ್ತರ ಬಡಿಗೇರ ಸಂಗೀತ ಸೇವೆಗೆ ನಿಡಗುಂದಿಯ ಶರಣಯ್ಯ ಹೊಸಪೇಟಿಮಠ ತಬಲಾ ಸಾಥ ನೀಡಿದರು. ಕುಮಾರ ಅಂಜು ಸೂಡಿ ಸ್ವಾಗತಿಸಿದರು. ಶಿಕ್ಷಕ ರುದ್ರಪ್ಪ ಬೆಲ್ಲದ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.



■ವಿಜಯಸಾಕ್ಷಿ ಸುದ್ದಿ, ಗದಗ

ಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ಸಂಘದಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಧ್ವಜಾರೋಹಣವನ್ನು ಬಸವರಾಜ ವೀರಪ್ಪ ಬಿಂಗಿ ನೆರವೇರಿಸಿದರು ಉಪಾಧ್ಯಕ್ಷ ಈಶ್ವರಪ್ಪ ಎಂ.ಕಿರೇಸೂರ, ನಿರ್ದೇಶಕ ಶಿವಪ್ಪ ಹನುಮಪ್ಪ ಗಾಣಿಗೇರ, ಷಣ್ಮುಖಪ್ಪ ಚಂದ್ರಶೇಖರಪ್ಪ ಬಡ್ನಿ, ಅಶೋಕಪ್ಪ ಲಕ್ಕುಂಡಿ, ಡಾ.ಶೇಖರ ಸಜ್ಜನರ, ಶರಣಗೌಡ ಪವಾಡಗೌಡ್ರ, ಬಸಪ್ಪ ಹರಿಜನ, ಪರಶುರಾಮ ದಾಸಪ್ಪನವರ, ಶಿವಾನಂದ ಹವಲಪ್ಪನವರ, ಬಸವರಾಜ ಕಿರೇಸೂರ, ಶಾಂತಾದೇವಿ ರಮೇಶ ಮಂದಾಲಿ, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka